Azim Premji Foundation

# FA TALKIES

EXPLORING THE VOICES UNHEARD

JULY 2017 ಸಂಚಿಕೆ-9 ISSUE-IX



SAVE TIGERS

## INTERNATIONAL TIGERS DAY

## JULY 29TH




'ವಿಶ್ವ ಹುಲಿ ದಿನ' ವನ್ನು ಎಲ್ಲಾ ದೇಶಗಳಲ್ಲಿ ಆಚರಿಸಲಾಗುತ್ತಿದೆ. 2010 ರಲ್ಲಿ ರಷ್ಯಾದ ಸೆಂಟ್ ಪೀಟರ್ಸ್‌ಬರ್ಗನಲ್ಲಿ ನಡೆದ ಹುಲಿಯ ಸಮ್ಮೇಳನದಲ್ಲಿ ಈ ದಿನಾಚರಣೆಯ ನಿರ್ಣಯ ಕೈಗೊಳ್ಳಲಾಗಿದೆ. ನಿರಂತರ ಬೇಟೆಯಾಡುವಿಕೆ ಹಾಗೂ ಕಾಡಿನ ವಿನಾಶದಿಂದಾಗಿ ಅನೇಕ ದೇಶಗಳಲ್ಲಿ ಇಂದು ಹುಲಿಗಳ ಸಂಖ್ಯೆ ವಿರಳವಾಗಿದೆ. ಕೆಲವು ದೇಶಗಳಲ್ಲಿ ನಾಮಾವಶೇಷವಾಗಿವೆ ಎಂದರೂ ತಪ್ಪಾಗಲಿಕ್ಕಿಲ್ಲ. ಇಂತಹ ಹೀನ ಸ್ಥಿತಿಯನ್ನು ತಲುಪಿದ ಹುಲಿಗಳ ಸಂತತಿಯ ಬಗ್ಗೆ ಜಾಗರೂಕತೆ ಮೂಡಿಸಿ ಮುಂದಿನ ಪೀಳಿಗೆಗೆ ಉಳಿಸುವ ಉದ್ದೇಶ ಈ ದಿನ ಹೊಂದಿದೆ.

ಈ ಸ್ಥಿತಿಗೆ ಯಾರನ್ನೂ ದೂರಬೇಕು?
ಪ್ರಾಣಿಗಳೇ ಗುಣದಲಿ ಮೇಲು, ಮಾನವ ಅದಕಿಂತ ಕೀಳು
ಉಪಕಾರ ಮಾಡಲಾರ, ಬದುಕಿದರೆ ಸೈರಿಸಲಾರ

ಎಂಬ ಜಿ.ಉದಯಶಂಕರರ ಸಾಲುಗಳು ನೆನಪಿಗೆ ಬರದಿರಲಾರವು. ಇಂತಹ ಆಘಾತಕಾರಿ ಅಂಶಗಳನ್ನು ಆದಷ್ಟು ಕಡಿಮೆ ಮಾಡಬೇಕಾದಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ ಎಂಬ ದೃಷ್ಟಿಕೋನ ಈಗ ನಮ್ಮೆಲ್ಲರಲ್ಲಿ ಮೂಡಿ, ಇತರರಿಗೆ ಮೂಡಿಸಬೇಕಾಗಿದೆ. ಶಕ್ತ ಹುಲಿಗಳೇ ಕಣ್ಮರೆಯಾಗುತ್ತಿರುವಾಗ ಜೀವವೈವಿಧ್ಯತೆಯ ಕಾಡಿನ ಪರಿಸರಗಳಲ್ಲಿ ಅದೆಷ್ಟು ಜೀವಿಗಳು ಮಾನವನ ದುರಾಸೆಗೆ, ಮೋಜಿಗೆ ಬಲಿಯಾಗಿರಬಹುದು. ನನ್ನದಲ್ಲದ ಭೂಮಿಯ ಮೇಲೆ ನನ್ನ ಈ ಕೃತ್ಯಗಳು ನಡೆಯಬಾರದು ಎಂಬ ಅರಿವು ಮೂಡುವುದಾದರೂ ಎಲ್ಲಿಂದ, ಹೇಗೆ. ನಾವು ನಿಜವಾಗಿಯೂ ಸುಶಿಕ್ಷಿತರೇ? ಮೋಜಿನ ಆಟಕ್ಕೆ, ತೀರಲಾರದ ದಾಹಕ್ಕೆ ನಮ್ಮ ಮಕ್ಕಳು-ಮೊಮ್ಮಕ್ಕಳು ಬಲಿಯಾಗದೇ, ಬಾಳಿ-ಬದುಕಬೇಕಾದ ಸುಂದರ ಸೃಷ್ಟಿಯನ್ನೊಮ್ಮೆ ನೆನೆದು ವನ್ಯಜೀವಿಗಳು ಸ್ಮಾರಕವಾಗುವುದನ್ನು ತಪ್ಪಿಸಬೇಕಾಗಿದೆ. ಭೂಮಿಯು ಬೋಳಾಗಿ, ಬರಡಾಗಿ ಬಾಯಿ ತೆರೆದಾದ ಮೇಲೆ, ಮಾನವನೂ ಕೇವಲ ಗತಕಾಲದ ಗುರುತಾಗಿ ಉಳಿದರೇ? ಅದೆಷ್ಟು ಜೀವಿಗಳಿಗೆ ನೆಮ್ಮದಿಯೋ, ಹುಲಿಯೂ ಉಳಿದಾವು, ಹುಳುನೂ ಉಳಿದಾವು, ಹುಲುಮಾನವನ ಅವಶೇಷವಾಗಿಸಿ...

***ಕೊನೆಯ ಮಾತು, ಅರಣ್ಯ ಉಳಿಸಲು ಅರಣ್ಯಕ್ಕೇ ಹೋಗಬೇಕಾಗಿಲ್ಲ!***

**ಫ-ಟಾಕೀಸ್ ತಂಡ**

# Contents


ಜನಸಂಖ್ಯಾ ನಿಯಂತ್ರಣ -ಪೆರಿ....................................................... 4

SCHOOL -Arpitha ............................................................ 5

ಅಕ್ಷರ ಸೇವೆಯ ಸರ್ಕಾರ - ಮಂಜುನಾಥ್ ಎ ಆರ್................................. 6

ನಾನು ನನ್ನ ಟೋಪಿ - ಸೌಂದರ್ಯ ಶೆಟ್ಟಿ.......................................... 8

ನನ್ನ ಕನಸಿನ ಶಾಲೆ - ಮಂಜುನಾಥ್ ಎ ಆರ್ ..................................... 9

ಸ್ಫೂರ್ತಿ ಸೆಲೆ ಅಜ್ಜಿ -ಚಿಕ್ಕವಿರೇಶ್................................................ 10

ಹನಿಗತೆಗಳು - ಮಂಜುನಾಥ್ ಎ ಆರ್ ............................................ 11

ಮರೆಯಲಾಗದ ಬಾಲ್ಯದ ಉಪವಾಸದ ದಿನಗಳು – ಇಬ್ರಾಹಿಂ.ಪಿ.................. 12

Valuable Day - Lohita HN................................................ 13

ಖುಷಿ ತಂದ ತರಗತಿ, ಮೂಡಿ ಬಂದ ಹೊಸ ಪ್ರಪಂಚ - ಚಿತ್ರಾ ........ 14

ಮೆರವಣಿಗೆ – ಶಿವಕುಮಾರ ಸಿ ಎಸ್ 15

ಅವು ಪುಸ್ತಕಗಳಲ್ಲ,ಮನಸುಗಳು –ಸಂಜಯ ಡ್ಯಾನಿಯಲ್ 16

# ಜನಸಂಖ್ಯಾ ನಿಯಂತ್ರಣ

-ಪೆರಿ

ಒಂದು ಕಾಲದಲ್ಲಿ ಮಕ್ಕಳಿರಲವ್ವ ಮನೆ ತುಂಬ ಎಂಬ ಮಾತಿತ್ತು, ಹಾಗೇನೆ ಮಕ್ಕಳು ಇರುತ್ತಿದ್ದರು, ಸಮೃದ್ಧವಾಗಿ ಬೆಳೆಯುತ್ತಿದ್ದರು. ಆಮೇಲೆ ಒಂದು ಕಾಲ ಬಂತು, ಹೆಚ್ಚು ಮಕ್ಕಳಿದ್ದ ಮನೆಯನ್ನು ಸೋಲಿನ ಸಂಕೇತವಾಗಿ ನೋಡಿದ ಕಾಲವದು. ಬಡತನಕ್ಕೆ, ಕಷ್ಟಕ್ಕೆ, ತೊಂದರೆಗಳಿಗೆ, ರೋಗ-ರುಜಿನಗಳಿಗೆ ಮೂಲ ಕಾರಣವೇ ಹೆಚ್ಚು ಮಕ್ಕಳಾಗುವುದು ಎಂಬುದನ್ನು ತುಂಬಾ ಪರಿಣಾಮಕಾರಿಯಾಗಿ ಬಿಂಬಿಸಲಾಗುತ್ತಿತ್ತು. ಸರಿ ಯಾವುದು? ತಪ್ಪು ಯಾವುದು? ಸ್ವಲ್ಪ ಸೂಕ್ಷ್ಮವಾಗಿ ನೋಡಲು ಹೊರಟರೆ ಈ ಎರಡು ನಿಲುವಿನಲ್ಲೂ ಒಂದರ್ಧ ಸತ್ಯ ಕಾಣುತ್ತದೆ.

ಮೂಲತಃ ಕೃಷಿಯನ್ನು ಅವಲಂಬಿಸುವ ಒಂದು ಕುಟುಂಬಕ್ಕೆ ಹೆಚ್ಚು ದುಡಿಯುವ ಕೈಗಳು ಯಾವತ್ತು ಬೇಕಾಗುತ್ತದೆ ಹಾಗೂ ಅದು ಸಂಪತ್ತಿನ ಮೂಲವಾಗುತ್ತದೆ. ಕೃಷಿಯಿಂದ ಹೊರಬಂದ ಕುಟುಂಬಗಳಿಗೆ ಹೊರಗೆ ಸಂಪಾದಿಸುವ ಆದಾಯವನ್ನು ಅವಲಂಬಿಸಿದ ಕುಟುಂಬಗಳಿಗೆ ಆದಷ್ಟು ತಿನ್ನುವ ಬಾಯಿ ಕಡಿಮೆಯಿರುವುದು ಸೂಕ್ತವೆನಿಸುತ್ತದೆ. ಮಕ್ಕಳು ಕಡಿಮೆ ಆಗುವುದು ಅವರ ಸಹಜ ಆಯ್ಕೆ ಆಗಿರುತ್ತದೆ.

ಇಲ್ಲಿ ಮೂಲ ಪ್ರಶ್ನೆಯೊಂದು ಉದ್ಭವಿಸುತ್ತದೆ. ಜನಸಂಖ್ಯೆಯನ್ನು ಮಾನವ ನಿಯಂತ್ರಿಸಲು ಸಾಧ್ಯವೇ? ಮೇಲ್ಮಟ್ಟಕ್ಕೆ "ಹೌದು ಸಾಧ್ಯ" ಎಂದು ಅನಿಸಿದರೂ, ನಮ್ಮ ಸುತ್ತಮುತ್ತಲನ್ನು ಬಿಟ್ಟು ವಿಸ್ತಾರವಾದ ಈ ಭೂಮಿಯನ್ನು ನೋಡಿದಾಗ ಎಲ್ಲವೂ ಮಾನವನ ಕೈಯಲ್ಲಿ ಇಲ್ಲ ಎಂಬುದು ಗೋಚರವಾಗುತ್ತದೆ.

ನಮಗೆ ತಟ್ಟನೆ ಹೊಳೆಯುವ 'ನಿಯಂತ್ರಣ' ಪರಿಹಾರಕ್ಕೆ ಇನ್ನೊಂದು ಮುಖವಿದೆ. ಮಕ್ಕಳಾಗುವುದನ್ನು ನಿಯಂತ್ರಣ ಮಾಡಿದ ದೇಶಗಳು ನಿಯಂತ್ರಣ ಆದ ಮೇಲೆ ಪಾಡುಪಡುತ್ತವೆ. ಆ ದೇಶಗಳು ಒಂದು ಮಗುವೆಂದು ಘೋಷಿಸಿ, ಒಂದು ತಲೆಮಾರು ದಾಟಿದ ಮೇಲೆ ಮುಂದಿನ ಜನಸಂಖ್ಯೆ ಕಡಿಮೆಯಾದುದು ಅರಿವಾಗುತ್ತದೆ. ಹೆಚ್ಚು ಮಕ್ಕಳಾಗಬೇಕು ಎಂಬುದನ್ನು ಮನಗಾಣುತ್ತವೆ . . . . ಹೆಚ್ಚು ಮಕ್ಕಳಾಗಲು ಪ್ರೋತ್ಸಾಹ ನೀಡುತ್ತಾರೆ. ಈ ಪ್ರೋತ್ಸಾಹಕ್ಕೆ ಜನ ಸಮುದಾಯ ಹಾಗೇನೇ ಪ್ರತಿಕ್ರಿಯಿಸುವುದೇ? ಇಲ್ಲ. ಕಡಿಮೆ ಮಕ್ಕಳ ಅಥವ ಮಕ್ಕಳಿಲ್ಲದ ಕುಟುಂಬದ ಕೆಲವು ಸುಖಗಳನ್ನು ಕಂಡುಂಡು ತಕ್ಷಣ ಪ್ರತಿಕ್ರಿಯಿಸುವುದಿಲ್ಲ! ಆಗ ಸರ್ಕಾರಗಳು ಪೇಚಿಗೆ ಸಿಕ್ಕಿಕೊಂಡಿರುವ ಅನೇಕ ಪ್ರಸಂಗಗಳು ನಮ್ಮ ಇವತ್ತಿನ ಸಂದರ್ಭದಲ್ಲಿದೆ. ಇದು ಕೇವಲ ಮನಸ್ಥಿತಿಯ ಪ್ರಭಾವ. ಇನ್ನು ಮದುವೆ ಆಗುವ ವಯಸ್ಸು ಹೆಚ್ಚಾಗುತ್ತಾ ಹೋದಾಗ ಮಕ್ಕಳು ಕಡಿಮೆ ಬೇಕಾಗುವ ಸ್ಥಿತಿಯು ಉಂಟಾಗುತ್ತದೆ. ಮಹಿಳೆ ಮನೆಯಿಂದ ಹೊರಗೆ ಹೋದಾಗ, ಅಂದರೆ ಕೆಲಸದಲ್ಲಿ ನಿರತರಾದಾಗ ಕೂಡ ಅಂತ ಜನಾಂಗಗಳಲ್ಲಿ ಮಕ್ಕಳು ಕಡಿಮೆ ಆಗುವ ಸ್ಥಿತಿ ಇರುತ್ತದೆ . . . . ಒಮ್ಮೆ ಒಂದು ಜನಾಂಗದಲ್ಲಿ ಮಕ್ಕಳಾಗುವ ಸಂಖ್ಯೆ ಕಡಿಮೆಯಾದರೆ ಆಮೇಲೆ ಅದನ್ನು ವೃದ್ಧಿಸಲು, ಹೆಚ್ಚು ಮಾಡಲು ಮಾನವನಿಗೆ ತುಂಬಾ ಕಷ್ಟವಾಗುತ್ತದೆ ಎಂದು ನಮ್ಮ ಇತ್ತೀಚಿನ ಅನುಭವ ಹೇಳುತ್ತದೆ.

ಮಕ್ಕಳು ಅಷ್ಟು ಸುಲಭದಲ್ಲಿ ನಮಗೆ ಬೇಕೆಂದ ಹಾಗೆ ಆಗುತ್ತದಾ? ನಮಗೆ ಹೌದು ಆಗುತ್ತದೆಯಲ್ಲ ಅನ್ನಿಸುತ್ತದೆ. ಆದರೆ ನಾವು ಸ್ವಲ್ಪ ಬೇರೆ ದೇಶಗಳನ್ನು ನೋಡಿದಾಗ ಅದು ಅಷ್ಟು ಸುಲಭ ಇಲ್ಲ ಎಂಬುದು ಮನದಟ್ಟಾಗುತ್ತದೆ. ಒಂದು ವಿಷಯ ತುಂಬಾ ಮುಖ್ಯ. ಏನೆಂದರೆ ಭೂಮಿಯ ಫಲವತ್ತತೆಯ ಹಾಗೆ ಬೇರೆಬೇರೆ ಪ್ರದೇಶದಲ್ಲಿ ಮನುಷ್ಯರ ಫಲವತ್ತತೆಯಿದೆ. ದಪ್ಪ ಮಟ್ಟದಲ್ಲಿ ಹೇಳುವುದಾದರೆ equator (ಸಮಭಾಜಕ ವೃತ್ತ) ಹತ್ತಿರ ಇರುವ ಪ್ರದೇಶಗಳು ತುಂಬಾ ಫಲವತ್ತಾದ ಪ್ರದೇಶ, ಅಲ್ಲಿನ ಜನರ ಫಲವತ್ತತೆ ತುಂಬಾ ಸಮೃದ್ಧವಾಗಿದೆ. ಹಾಗೆ ಮಕ್ಕಳು ಆ equator ಸುತ್ತ ಬದುಕುವ ಜನಾಂಗಗಳಿಗೆ ತುಂಬಾ ಮಕ್ಕಳಾಗುತ್ತವೆ. ಅವರ ಫಲವತ್ತತೆ ತುಂಬಾ ಸಮೃದ್ಧವಾಗಿರುತ್ತದೆ. Equatorನಿಂದ ದೂರ ಹೋಗುತ್ತಿದ್ದ ಹಾಗೆ ಈ ಸಂತತಿ ಫಲವತ್ತತೆ ಸಾಮರ್ಥ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಭಾರತ, ಚೈನಾ, ಆಫ್ರಿಕಾ ದೇಶಗಳು ತುಂಬಾ ಫಲವತ್ತತೆ ಇರುವ ದೇಶಗಳು. ಹಾಗೆ ಇಲ್ಲಿ ಜನಸಂಖ್ಯೆಯು ಸಮೃದ್ಧವಾಗಿದೆ. ಇನ್ನು ಚಳಿ ಪ್ರದೇಶಕ್ಕೆ ಹೋಗುತ್ತಿದ್ದ ಹಾಗೆ ಮಕ್ಕಳಾಗುವುದು ಕಡಿಮೆಯಾಗುತ್ತಾ ಹೋಗುವುದನ್ನು ನೋಡುತ್ತೇವೆ. ಬೇಕು ಅಂದರೂ ಮಕ್ಕಳಾಗುವುದಿಲ್ಲ. ಸರ್ಕಾರ incentives ಕೊಟ್ಟರೂ ಮಕ್ಕಳಾಗುವುದಿಲ್ಲ. ಏನು ಮಾಡಿದರೂ ಮಕ್ಕಳಾಗುವುದಿಲ್ಲ.

ಇದರಲ್ಲಿ ನಾವು ಮಾನವರಾಗಿ ಗಮನಿಸುವ ಅಂಶ ಇನ್ನೊಂದಿದೆ, ನಾವು ಮಾನವರೇ ನಮ್ಮ ಕೈಯಾರೆ ಕಾಲಕಾಲಕ್ಕೆ ಮಾರಣಹೋಮ ಮಾಡಿಕೊಂಡು ಬಂದಿದ್ದೇವೆ. ಯುದ್ದಗಳು, ಜಾಗತಿಕ ಯುದ್ಧಗಳು ಜನಸಂಖ್ಯೆಯ ಬಹುದೊಡ್ಡ ಭಾಗವನ್ನು ನಾಶ ಮಾಡಿದ್ದಿದೆ. ಸರಿಯಾಗಿ ಯುದ್ದಗಳಲ್ಲಿ ಮಡಿದವರ ಸಂಖ್ಯೆ ನೋಡಿದರೆ ನಮಗೆ ಕಂಗಾಲಾಗುತ್ತದೆ. ಮಾನವ ಎಲ್ಲಾ ತಿಳಿದು ಹೀಗೆ ಮಾಡಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ತುಂಬಾ ಬೃಹದಾಕಾರದಲ್ಲಿ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಆದರೆ ಇದು ಸತ್ಯ. ಯುದ್ಧವನ್ನು ವೈಭವೀಕರಿಸುವ ಈ ಸಂದರ್ಭದಲ್ಲಿ ನಾವು ಮಾನವರಾಗಿ ಈ ಬಗ್ಗೆ ತುಂಬಾ ಯೋಚಿಸಬೇಕಾಗುತ್ತದೆ. ಬೇರೆಬೇರೆ ದೇಶಗಳು ತನ್ನ ದೇಶದೊಳಗೆ ಮಾತನಾಡುವುದು ಹಾಗೂ ಬೇರೆ ದೇಶದೊಟ್ಟಿಗೆ ವ್ಯವಹರಿಸುವುದನ್ನು ನೋಡಿದಾಗ ಯುದ್ದ ಸನಿಹ ಬರುವ ಅಂಶಗಳು ತುಂಬಾ

ಸ್ಪಷ್ಟವಾಗಿ ನಮಗೆ ಮನದಟ್ಟಾಗುತ್ತದೆ. ಯುದ್ಧ ನಿಲ್ಲಿಸುವ ಪ್ರಯತ್ನ ಎಲ್ಲೂ ಆಗುವುದಿಲ್ಲ. ರಾಷ್ಟ್ರಮಟ್ಟದಲ್ಲೂ, ಒಂದು ಮನೆಯ ಒಳಗೂ! ಇದಾಗ್ಯೂ ಇನ್ನೊಂದು ವಿಚಾರವಿದೆ, ನಾವು ಜನಸಂಖ್ಯೆಯನ್ನು ನಿಯಂತ್ರಿಸುತ್ತಿದ್ದೇವೆ ಎಂದು ಬೀಗುತ್ತಿದ್ದಾಗ ಆಗೊಮ್ಮೆ, ಈಗೊಮ್ಮೆ ನಮಗೆ ಈ ಪ್ರಕೃತಿ ನಮ್ಮೆಲ್ಲ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿ "ನಮ್ಮ ಕೈಯಲ್ಲಿ ಏನೂ ಇಲ್ಲ" ಎಂಬ ಭಾವನೆ ಬರುವಂತೆ ವ್ಯವಹರಿಸುತ್ತದೆ. ಹಾಗೆ ನೋಡಿದರೆ ಡೈನೋಸಾರಸ್‌ನಂತಹ ಅನೇಕ ಪ್ರಾಣಿ, ಪಕ್ಷಿ ಸಂಕುಲಗಳನ್ನೇ ನಿರ್ನಾಮ ಮಾಡಿಕೊಂಡು ಬಂದಿದೆ. ನಮ್ಮ ಕಣ್ಣ ಮುಂದೆಯೇ ಅನೇಕ ಗಿಡ, ಮರ, ಪಶು, ಪಕ್ಷಿ, ಪ್ರಾಣಿಗಳ ಸಂತತಿಗಳು ನಾಶವಾಗಿವೆ. ಅವುಗಳ ಕುರುಹೇ ಇಲ್ಲದಾಗಿದೆ. ಪ್ರಕೃತಿ ಒಂದು ಸಮತೋಲನವನ್ನು ಕಾಪಾಡಿಕೊಂಡು ಬರುತ್ತದೆ. ಈ ಸಮತೋಲನದ ಅರಿವು ನಮಗೆ ಇರಬೇಕಾಗುತ್ತದೆ.

ಬಹುಶಃ ಅದಕ್ಕಾಗಿಯೇ ಜ್ಞಾನೋದಯ ಆದವರೆಲ್ಲರೂ ದ್ವೇಷವನ್ನು ಮೆಟ್ಟಿ ನಿಲ್ಲಲು, ಎಲ್ಲಾ ಜೀವಿಗಳನ್ನು ಪ್ರೀತಿಸಲು, ಹಾಗೂ ಈ ಪ್ರಕೃತಿಯೊಂದಿಗೆ harmonious ಆಗಿ ಬದುಕಲು ಸಂದೇಶವನ್ನು ನೀಡಿರುವುದು. ಇದು ಬಿಟ್ಟರೆ ನಮಗೆ ನಾಶವನ್ನು ತಡೆಯುವ ಯಾವುದೇ ಮಾರ್ಗ ಕಾಣುವುದಿಲ್ಲ. ಸುಖವಾಗಿ ಬದುಕಲು ಈ ಅಂಶಗಳು ಬೇಕು. "ದ್ವೇಷಿಸುವುದು ಎಂದರೆ ಇನ್ನೊಬ್ಬರು ಸಾಯಬೇಕೆಂದು ನಾವು ವಿಷ ಕುಡಿದ ಹಾಗೆ!" ಬುದ್ಧನ ಈ ಸರಳವಾದ ಮಾತು ಎಷ್ಟೊಂದು ಸರಳ ಸತ್ಯ!

## SCHOOL -Arpitha

I mourn, looking at the girl
Whose small palms are holding a short notebook
Filled with longstanding tables, writing
over and over
She's upset, as her teacher makes to
write
same numbers.
She craves to learn more,
To know the world, to build her life
Those tiny eyes are unaware
of the brutality she is standing with
plausibly nobody does.



Her heart jumps entering class, cause
She is the first in her family
To smell the book.
And she stands as a rebel, for those Stone Age rules
With her two sisters aside, to elevate their lives.
And write their stories and
Her story stays cold and untold.

## ಅಕ್ಷರ ಸೇವೆಯ ಸರ್ಕಾರ - ಶಿಕ್ಷಣ ವ್ಯವಸ್ಥೆಗೆ ಕೈಜೋಡಿಸೋಣವೇ.....!

ಮಂಜುನಾಥ್ ಎ ಆರ್

ನಾವೆಲ್ಲರೂ ವರ್ತಮಾನ ಹಾಗೂ ಭವಿಷ್ಯತ್ತಿನ ನೆಲೆಯಲ್ಲಿ ಮಕ್ಕಳನ್ನು ಬಹು ನಿರೀಕ್ಷಿತ ಶೋಭಾಯಮಾನ ಕೂಸುಗಳು ಭವಿತವ್ಯದ ಸತ್ಪ್ರಜೆಗಳು ಎಂಬಂತೆ ಬುದ್ಧಿಜೀವಿಗಳು ಮಾತನಾಡುವುದು, ಆ ನೆಲೆಯಲ್ಲಿ ಬೇಕಾದ ಸರ್ವ ಸಿದ್ಧತೆಗಳನ್ನು ಮಗುವಿನ ಬಾಲ್ಯ / ಬುನಾದಿಯಿಂದಲೇ ಮಾಡುತ್ತೇವೆ. ಹಾಗಾದರೆ ಸತ್ಪ್ರಜೆಗಳು ಎಲ್ಲಿ ರೂಪುಗೊಳ್ಳುತ್ತಾರೆ ?, ಹೇಗೆ ತಯಾರಾಗುತ್ತಾರೆ ? ಅವರನ್ನು ರೂಪಿಸುವವರು ಯಾರು ? ಎಂಬಂತಹ ಮೂಲಭೂತ ಪ್ರಶ್ನೆಗಳನ್ನು ಕಂಡುಕೊಳ್ಳುವ ಮಾಗಿ ಕಾಲ ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲಿರುವ ಜವಬ್ದಾರಿ. ಇದು ಕೇವಲ ಶಿಕ್ಷಣ ಇಲಾಖೆಯದ್ದೇ? ಅಥವ ಪ್ರತಿಯೊಬ್ಬ ನಾಗರೀಕನ ಮೂಲಭೂತ ಕರ್ತವ್ಯವೇ? ಈ ನೆಲೆಯಲ್ಲಿ ಯೋಚಿಸುತ್ತಿರುವಾಗ ಹತ್ತು ಹಲವು ಯೋಚನೆಗಳು ನಮ್ಮೊಳಗೆ ಮಿಂಚಿನಂತೆ ಸಂಚಲಿಸುತ್ತವೆ. ಪ್ರತಿಯೊಬ್ಬ ಭಾರತೀಯನಿಗೂ ಅವನದ್ದೇ ಆದ ಮೂಲಭೂತ ಹಕ್ಕು-ಕರ್ತವ್ಯಗಳಿವೆ, ಕಾಯ್ದೆ-ಕಾನೂನುಗಳಿವೆ, ಸಾಂವಿಧಾನಿಕ ರಕ್ಷಣೆಗಳಿವೆ, ಸಾಂವಿಧಾನಿಕ ಮೌಲ್ಯಗಳಿವೆ ಹಕ್ಕುಗಳ ವಿಚಾರದಲ್ಲಿ, ಸೌಲಭ್ಯಗಳ ವಿಚಾರದಲ್ಲಿ ಯಾವೊಬ್ಬ ಪ್ರಜೆಯೂ ಹಿಂದೆ ಸರಿಯುತ್ತಿಲ್ಲ, ಆದರೆ **ಅಕ್ಷರ, ಅರಿವು, ಅಭಿವೃದ್ಧಿ** (**3-ಅ**) ಅಂ-ದಾಗ ಇದಕೆ ಸಹಕರಿಸುವವರ ಸಂಖ್ಯೆ ತೀರಾ ಬೆರಳೆಣಿಕೆ ಮಾತ್ರ ಎನ್ನಬಹುದು.

**"ನಾವು ಅಕ್ಷರವನ್ನು ರಕ್ಷಿಸಿದರೆ, ಅಕ್ಷರ ನಮ್ಮನ್ನು ರಕ್ಷಿಸುತ್ತದೆ" ಎನ್ನುವ ಮಾತನ್ನು ನನ್ನ ಶಾಲಾ ಗುರುಗಳು ಹೇಳುತ್ತಿದ್ದರು, ಅದು ಅನುಸರಣೆ ಅನಿಸಬಹುದು ಆದರೆ ಸರ್ವಕಾಲಿಕ ಸತ್ಯವೇ. ಈ ನೆಲೆಯಲ್ಲಿ ನಾವು ಅಕ್ಷರವನ್ನು ಹೇಗೆ ರಕ್ಷಿಸಬೇಕು**? **ಅಕ್ಷರದ ಅರಿವನ್ನು ಮಕ್ಕಳಲ್ಲಿ** / **ಸಮುದಾಯದಲ್ಲಿ ಹೇಗೆ ಮೂಡಿಸಬೇಕು** ? **ಅಕ್ಷರಗಳ ಅರಿವಿನ ಅಭಿವೃದ್ಧಿಗೆ ನೆಲೆ ಯಾವುದು**? **ಈ ಪ್ರಶ್ನೆಗಳಿಗೆ ಒಂದೇ ಉತ್ತರ ಅದು ಶಾಲೆ.**

ಹ್ಞಾ, ಹೌದು! ಶಾಲೆ ಮಾತ್ರ ಒಂದು ಸುಸ್ಥಿರ ನ್ಯಾಯೋಚಿತ ಸಮುದಾಯವನ್ನು ನಿರ್ಮಿಸಲು ಬೇಕಾಗಿರುವ ಮೂಲಾಂಶಗಳನ್ನು ಸೃಷ್ಟಿಸಲು ಸಾಧ್ಯ. ಇದು ಈ ನೆಲದ ಪ್ರತಿಯೋರ್ವನ ಪ್ರಥಮ ಕಾರ್ಯವಾಗಬೇಕು ಮತ್ತು ಅದಕೆ ಸಹಕರಿಸಬೇಕು. ಮಗುವಿನ ಬಾಲ್ಯ / ಬುನಾದಿಯಿಂದಲೇ ನಾವೆಲ್ಲರೂ ಈ ನೆಲೆಯಲ್ಲಿ ಚಿಂತಿಸಿ ಶ್ರಮಿಸಬೇಕಾಗಿದೆ. ತರಗತಿಯಲ್ಲಿ ಒಬ್ಬ ಸುಗಮಕಾರನಿಗೆಷ್ಟು ಜವಬ್ದಾರಿಯಿರುತ್ತದೋ, ಅಷ್ಟೇ ಜವಬ್ದಾರಿ ಆಯಾ ಪೋಷಕರು ಅಥವಾ ನಾಗರೀಕರಿಗೂ ಇರುವುದು ಸೂಕ್ತವೆನಿಸುತ್ತದೆ. ಮಗುವಿನ ಬಾಲ್ಯದಿಂದಲೇ ಅದರ ಕಲಿಕೆಯಲ್ಲಿ ನೆರವಾಗಬೇಕಾಗುತ್ತದೆ. ಆ ಮಗುವಿನ ಅಳು, ಸ್ಪರ್ಶ, ತೊದಲು ನುಡಿ, ಮಂದ ನಗೆ, ಹೆಜ್ಜೆಗಳು ಈ ಎಲ್ಲಾ ಪ್ರಕ್ರಿಯೆಯ ಹಿಂದೆ ಅದರ ಸಾಮಾಜೀಕರಣ ಅಡಗಿರುತ್ತದೆ ಎನ್ನುವಾಗ ಆ ಮಗುವಿಗೆ ಮನೆಯೇ ಕಲಿಕೆಯ ವನವಾಗಬೇಕು. ಮನೆಯವರೇ ಪ್ರತಿ ಹಂತದಲ್ಲೂ ಕಲಿಕೆಗೆ ನೆರವಾಗಬೇಕು. "ಮಗು ಏನನ್ನು ಸುಮ್ಮನೆ ಹೀರಿಕೊಳ್ಳುವುದಿಲ್ಲ, ಎಲ್ಲವನ್ನು ತನ್ನ ಅನುಭವದ ತೆಕ್ಕೆಗೆ ತಂದುಕೊಂಡು ಹಿಂದಿನ ಅನುಭವಕ್ಕೆ ಹೊಸ ಅನುಭವವನ್ನು ತುಲನೆ ಮಾಡಿ ಹೊಸ ಜ್ಞಾನವನ್ನು ಗಟ್ಟಿಗೊಳಿಸಿಕೊಳ್ಳುತ್ತದೆ." ಇಂತಹ ಸಾಮರ್ಥ್ಯವಿರುವ ಮಗುವಿಗೆ ನಾವ್ಯಾಕೆ ನಮ್ಮ ಆಸೆ-ಅಭಿಲಾಷೆಗಳ ಹೆಸರಿನಲ್ಲಿ ಅವುಗಳ ಸ್ವಾತಂತ್ರ-ಹರಣ ಮಾಡಬೇಕು, ಪ್ರಸ್ತುತದಲ್ಲಿ ನಾವೆಲ್ಲರೂ ಯೋಚಿಸುವಂತೆ ಸಂವಿಧಾನದ ರಾಜ್ಯ ನೀತಿ-ನಿರ್ದೇಶಕ ತತ್ವಗಳ ಆಶಯಗಳು NCF-2005 ನ ರೂಪದಲ್ಲಿ ಪ್ರತಿಯೋರ್ವನಿಗೂ ಶಿಕ್ಷಣ ಸೌಲಭ್ಯದ ರೂಪದಲ್ಲಿ ಲಭಿಸುತ್ತಿದೆ. ಹೀಗಿರುವಾಗ ಪ್ರತಿಯೊಬ್ಬ ನಾಗರೀಕನು ಶಾಲೆಗೆ, ಶಾಲಾ ಹಿನ್ನಲೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಸಹಾಯ ಮಾಡಬೇಕಾಗಿದೆ.

ನಮ್ಮ ದೇಶದ ಪ್ರತಿಯೊಂದು ಸರ್ಕಾರಿ ಶಾಲೆಗಳು ನ್ಯಾಯೋಚಿತವಾದ, ಸುಸ್ಥಿರವಾದ ಸಮಾಜವನ್ನು ನಿರ್ಮಿಸಲು ಸಂಕಲ್ಪಿಸಿ ನಿಸ್ವಾರ್ಥ ಸೇವೆಗೈಯ್ಯುತ್ತಿದೆ.

- ಶಾಲಾ ತರಗತಿಗಳು ಸಾಂವಿಧಾನಕ ಮೌಲ್ಯಗಳನ್ನು ಬಾಲ್ಯದಿಂದಲೇ ರೂಢಿಸಲು ತರಗತಿ ಪ್ರಕ್ರಿಯೆಯಲ್ಲಿಯೇ ಮಕ್ಕಳ ಇಷ್ಟಾನುಸಾರವಾಗಿ ಕಲಿಯುವ ವ್ಯವಸ್ಥೆ ಕಲ್ಪಿಸಿದೆ, ಉದಾಹರಣೆಗೆ; ನಲಿಕಲಿ ವರ್ಗ ಪ್ರಕ್ರಿಯೆಯೇ ಸಾಕ್ಷಿ.
- ಮಕ್ಕಳ ಆರೋಗ್ಯದ ದೃಷ್ಟಿಯಲ್ಲಿ ಚಿಕಿತ್ಸೆ, ಹಾಲು, ಆಹಾರ, ಸೈಕಲ್‌ನಂತಹ ಸೌಲಭ್ಯಗಳನ್ನು ಕಲ್ಪಿಸಿದೆ.

  ಕಲಿಕೆಗೆ ಅವಶ್ಯವಾಗಿ ಬೇಕಾದ ಚರ್ಚೆ, ಸಂವಾದಗಳು.

* ಮಕ್ಕಳ ಕಲಿಕೆಯ ದೃಷ್ಠಿಯಲ್ಲಿ ಪುಸ್ತಕಗಳು, ವಿದ್ಯಾರ್ಥಿನಿಲಯಗಳು.
* ಸಮತೆಯ ದೃಷ್ಠಿಯಲ್ಲಿ ಸಮವಸ್ತ್ರಗಳು, ಪಾದರಕ್ಷೆಗಳು.
* ಮಕ್ಕಳನ್ನು ಪ್ರೋತ್ಸಾಹಿಸಲು ವಿದ್ಯಾರ್ಥಿ ವೇತನದಂತಹ ಸವಲತ್ತುಗಳು.
* ಶೈಕ್ಷಣಿಕ ಪ್ರವಾಸಗಳು, ಸ್ಥಳೀಯ ಇತಿಹಾಸ ಮಾಹಿತಿಗೆ ಜಿಲ್ಲಾದರ್ಶನದ ಕಾರ್ಯಕ್ರಮಗಳು.
* ಪ್ರತಿಭಾ ಪುರಸ್ಕಾರಗಳು, ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಪ್ರತಿಭಾ ಕಾರಂಜಿಗಳು.
* ಹೊಸ ಹೊಸ ಸಂಶೋಧನೆಗೆ ಇನ್ಸ್ಪೈರ್ ಅವಾರ್ಡ್ ‌ಗಳು ವಿದ್ಯಾರ್ಥಿ ವಿಜ್ಞಾನಿ ಪುರಸ್ಕಾರಗಳು.
* ಮಕ್ಕಳ ಸ್ವಕಲಿಕೆಗೆ ಪ್ರೇರಕವಾಗಿ ದೇಶಭಕ್ತಿಯ ಮೌಲ್ಯಗಳನ್ನು ಬೆಳೆಸಲು ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಲು ಸೇವದಳ, ಸ್ಕೌಟ್ಸ್ ಗೈಡ್ ತರಬೇತಿಗಳು.
* ಉಚಿತ ಗಣಕಯಂತ್ರದ ಕಲಿಕೆಗಳು.
* ಮಕ್ಕಳಿಗೆ ವಿಶೇಷ ಶಿಕ್ಷಣ (ಟೈಲರಿಂಗ್ ೮ನೇ ತರಗತಿ ಮೇಲ್ಪಟ್ಟವರಿಗೆ)
* ವಿದೇಶಿ ಪ್ರವಾಸಗಳು.

ಹೀಗೆ ಸರ್ಕಾರ ತಮ್ಮ ದೇಶದ ಮಕ್ಕಳಿಗೆ ಯಾವುದನ್ನು ಕೊರತೆಯಾಗದಂತೆ ಕಲಿಕೆಗೆ ಪೂರಕವಾಗಿ ಸಾಕಷ್ಟು ಸೌಲಭ್ಯಗಳನ್ನು ನೀಡಿದೆ. ಆದರೂ ನಮ್ಮ ಜನರು ಯಾಕೆ ಖಾಸಗಿ ಶಾಲೆಗಳಿಗೆ ಮುಗಿ ಬೀಳುತ್ತಿರುವರು ? ಸತ್ಯವೆಂದರೆ ಈ ಮೇಲಿನ ಯಾವ ಅಂಶಗಳು ಇಲ್ಲದಿರುವ ಸತ್ವಹೀನವಾದ ಕಲಿಕೆಗೆ ಹೆಚ್ಚು ಹೊತ್ತು ನೀಡುವುದು ಸರಿಯೇ? ಎಂಬುದನ್ನು ನಮ್ಮ ನಾಗರೀಕರು ಅರ್ಥ ಮಾಡಿಕೊಳ್ಳಬೇಕಿದೆ.

ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯು ಈ ಸರ್ಕಾರಿ ಶಾಲೆಗಳ ಉದ್ದೇಶಗಳು, ಗುರಿಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಈ ರೀತಿಯ ಸರ್ಕಾರಿ ಶಾಲೆಗಳ ಕಲಿಕಾ ಚಟುವಟಿಕೆಗಳಿಂದ ವಂಚಿಸಿ ತಮ್ಮ ಮಕ್ಕಳಿಗೆ ತಾವೇ ಅನ್ಯಾಯವೆಸಗುತ್ತಿದ್ದಾರೆ. ಮತ್ತೊಂದು ಶೋಚನೀಯ ಸಂಗತಿಯೆಂದರೆ ಪ್ರಬುದ್ಧವಾಗಿ ಮಾತನಾಡುವ, ಸರ್ಕಾರಿ ಸೇವೆಯಲ್ಲಿರುವ ನಾಗರೀಕರೇ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ಕಲಿಸಲು ಇಚ್ಛಿಸುತ್ತಾರೆ. ಅಲ್ಲಿನ ಯಾಂತ್ರಿಕ ಕಲಿಕೆಯು **'ಮಕ್ಕಳ ಮನಸ್ಸನ್ನು ಅರಳಿಸುವ ಬದಲು ಕೆರಳಿಸುವ ಯತ್ನ ಮಾಡ ಹತ್ತಿರುವುದನ್ನು'** ಪೋಷಕರಾದ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ. ಆ ಮಕ್ಕಳ ಮನಸ್ಥಿತಿಯು ಕಂಪ್ಯೂಟರ್‌ನ ಹಾಗೇ ಫೀಡ್ ಮಾಡಿದರೇ ಮಾತ್ರ ಮೆಮೊರಿಯಲ್ಲಿ ಸೇವ್ ಆಗುವುದು ಇಲ್ಲವಾದರೆ ಅವರು ಸೇವೆಯಲ್ಲಿ ನಾಪತ್ತೆಯಾಗುತ್ತಿರುವುದು ತೀರಾ ಸಾಮಾನ್ಯ ಅಂಶ. ಮತ್ತು ಈ ಖಾಸಗಿ ವ್ಯವಸ್ಥೆಯಲ್ಲಿ ಕಲಿತ ಮಕ್ಕಳು ತೀರಾ ಸುಲಭವಾಗಿ ಅನಾಹುತಗಳಿಗೆ ಕೈ ಹಾಕುವ ಜನರಾಗಿದ್ದಾರೆ. ಉದಾ; ಫಲಿತಾಂಶ, ಕಲಿಕೆ, ಜೀವನದ ಅತೀ ನಿರ್ಧಾರಕ ಸಂದರ್ಭಗಳಲ್ಲಿ ಎಡವುತ್ತಿರುವುದನ್ನು ಕಾಣಬಹುದು. ಇದಕ್ಕೆ ಕಾರಣ ನೋಡಿದಾಗ ಯಾಂತ್ರಿಕತೆ ಎಂಬುದನ್ನು ಎಂದಿಗೂ ಮರೆಯುವಂತಿಲ್ಲ. ಮತ್ತು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವಂತಹ ಆಲೋಚನೆಗಳು ಬಹು ಗಂಭೀರವಾದ ಪ್ರಮಾಣದಲ್ಲಿ ಇತ್ತಿಚೆಗೆ ನಡೆಯುತ್ತಲಿವೆ. ಆದರೂ ಇದು ***ಸಾಮಾನ್ಯನ ಮಟ್ಟಕ್ಕೆ ನಿಲುಕುವ ವಿಷಯವಾದಾಗ ಇಂತಹ ಸೇವೆಗಳು ಹೆಚ್ಚು ಫಲಿತವಾಗುತ್ತವೆ.*** ಹಾಗ ಮಾತ್ರ ಸರ್ಕಾರಿ ಶಾಲೆಗಳು ತಲೆಯೆತ್ತಿ ಕಲಿಸುತ್ತವೆ. ಶಿಕ್ಷಣದ ನೈಜ ಗುರಿ ಉದ್ದೇಶಗಳನ್ನು ಈಡೇರಿಸಿಕೊಳ್ಳುತ್ತವೆ. ಅದು ನಮ್ಮೆಲ್ಲರ ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಿ. ನಮಗೆ ಹಿತವೆನಿಸುವ ಸಮಾಜದ ಸೃಷ್ಠಿಗೆ ನಾವೇ ಕಾರಣವಾಗುತ್ತೇವೆ. ಇನ್ನಾದರೂ "ಖಾಸಗಿ ಶಾಲೆಗಳ ವ್ಯಾಮೋಹದಿಂದ ಹೊರ ಬನ್ನಿ, ನಿಮ್ಮ ಮಕ್ಕಳನ್ನು ಅದರಿಂದ ಹೊರ ತನ್ನಿ"- ಇದು ನಮ್ಮ ಸರ್ಕಾರಿ ಶಾಲೆಗಳ ಘೋಷ ವಾಕ್ಯವಾಗಬೇಕು. ಈ ನೆಲೆಯಲ್ಲಿ ನಾವು ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡು ದೇಶದ ಸ್ವಾಸ್ಥ್ಯವನ್ನು ಶಿಕ್ಷಣದ ಮೂಲಕ ಅನುಷ್ಠಾನಕ್ಕೆ ತರಲು ನಾವೆಲ್ಲರೂ ಶಿಕ್ಷಣ ವ್ಯವಸ್ಥಗೆ ಕೈಜೋಡಿಸೋಣವೇ.....!

# ನಾನು ನನ್ನ ಟೋಪಿ ...

- ಸೌಂದರ್ಯ ಶೆಟ್ಟಿ

ಯಾವುದೇ ಅಂಕಣ ಬರೆಯದೇ ತಿಂಗಳೆ ಕಳೆದೆವು ಬರೆಯಿರಿ, ಏನಾದರೂ ಬರೆಯಿರಿ ಎನ್ನುವ ಮಾತಿಗೆ ಖಂಡಿತಾ ಬರೆಯುವ ಮನಸು ಮಾಡೇ ಮಾಡುತ್ತೇನೆ. ಅನ್ನೋ ಸುಳ್ಳು ಆಶ್ವಾಸನೆ ಕೊಟ್ಟು ಪಲಾಯನ ಮಾಡೋ ಪ್ರಯತ್ನದಲ್ಲಿದ್ದೇ ಪ್ರತಿ ಸಲ ಒಂದಲ್ಲ ಒಂದು ಸಂಗತಿ ನಡೆಯುವಾಗ ಇದರ ಬಗ್ಗೆ ಬರೆದರೆ ತುಂಬಾ ಚೆನ್ನಾಗಿ ಇರುತ್ತದೆ. ಸೂಪರ್ರಾಗಿ ಇರುತ್ತೆ  ಅಲ್ವ ಅಂದುಕೊಂಡಿದ್ದೆ ಬಂತು, ಅಯ್ಯೋ ಈ ಬರೆಯೋ ಉಸಾಬರಿ ನಮಗ್ಯಾಕೆ ಗುರು ಅಂತ ಅಂದುಕೊಂಡಿದರೂ, ‘ಛೇ! ನನ್ನ ಯೋಗ್ಯತೆಗೆ ಒಂದು ಅಂಕಣ ಬರೆಯೋಕೆ ಆಗ್ಲಿಲ್ಲ…!’ ಅನ್ನೋ ಸಂಕಟ. ಲಾಸ್ಟ್ ಟೈಮ್ ನನ್ನ ಪಾಸ್ಟ್ ಸ್ಟೋರಿ ಕೇಳಿ ಬೋರ್ ಆಗಿರೋ ನಿಮ್ಗೆ, ಇನ್ನೊಂದು ಸಲ ನನ್ನ  ಪ್ರಪಂಚಕ್ಕೆ ಕರ್ಕೊಂಡು ಹೋಗೋ ಪ್ರಯತ್ನ ಮಾಡ್ತಿದ್ದೀನೆ.  ಅಬ್ಬಬ್ಬಾ ಅಂದರೆ ಏನಾಗಬಹುದು…? ‘ಕೆಲವರು ಇಷ್ಟ ಪಡಬಹುದು ಅಥವಾ ಇನ್ನೂ ಕೆಲವರು ಇವರಿಗೆಲ್ಲಾ ಯಾಕಾದ್ರೂ ಬರಿಲಿಕ್ಕೆ ಹೇಳ್ತಾರೋ’ ಅಂತ ಮೂಗು ಮುರಿದು ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳೊ ಮೆಂಟ್ಯಾಲಿಟಿ ಗಾಳಿಗೆ ಯಾವತ್ತೋ ತೂರಿಯಾಗಿದೆ. ಅದ್ ಬಿಡಿ ರಾಗಣ್ಣ (ಫಟಾಕಿಸ್) ಈ ಸಲ ನನ್ನ ಮಾತು ಉಳಿಸಿಕೊಳ್ಳೊ  ಪ್ರಯತ್ನ ತುಂಬಾ ನಿಷ್ಠೆಯಿಂದ ಮಾಡಿದ್ದೀನಿ ಎಲ್ಲ ನಿಮ್ಮ ಮನೆ ಮಿರ್ಚಿ, ಭಜಿ ಮತ್ತು ಚುರುಮುರಿ ಕರಾಮತ್ತು.

ಪ್ರತಿಯೊಬ್ಬರಿಗೂ ಏನಾದರೂ ಒಂದು  ಆಗ್ಬೇಕಂತ  ಕನಸಿರುತ್ತೆ.  ನನ್ನ ಕನಸು ಹೀಗೆ ಡ್ಯಾನ್ಸರ್, ಲಾಯರ್ ಆಮೇಲೆ ಗಾರೆ ಕೆಲಸ, ಹೋಟೆಲ್‌ನಲ್ಲಿ ಅಡಿಗೆ ಮಾಡಬೇಕು ಹೀಗೆ. ಯಾರ್‍ಯಾರು ಏನೇನು ಕೆಲಸ ಮಾಡ್ತಿದ್ರೋ, ನಾ ನೋಡ್ತಿದ್ನೋ ನಾನು ಅವರ ಹಾಗೆ ಕೆಲಸ ಮಾಡಬೇಕು ಅನ್ನಕೊಳ್ತಿದ್ದೆ. ಕೊನೆಗೆ ಪೋಲಿಸ್ ಆಗ್ಬೇಕು ಅನ್ನೋ ಹೆಬ್ಬೆಯಕೆ ಹುಟ್ಟಕೊಂಡಿದ್ದು, ನೀವು ನಂಬ್ತಿರೋ, ಬಿಡ್ತಿರೋ, ಪ್ರತಿ ಸಲ ವಾರ್ಷಿಕೋತ್ಸವದ ಛದ್ಮ ವೇಷ (**fancy dress**) ಸ್ಪರ್ಧೆಯಲ್ಲಿ ಅಮ್ಮನತ್ರ ಹಠ ಮಾಡಿ ಮಿಲ್ಟ್ರಿ/ ಪೋಲೀಸ್ ಡ್ರೆಸ್ ತಗೊಂಡು, ಹಾಕ್ಕೊಳ್ತಿದ್ದೆ. ಅದ್ನ ಹಾಕ್ಕೊಂಡು ರಾತ್ರಿ ಇಡೀ ಮಲಗಿದ್ದೂ ಇದ್ದೆ, ಈಗ್ಲೂ  ಅಮ್ಮ ಅದ್ನ ನೆನ್ಸಕೊಂಡು ನಗ್ತಿರ್ತಾರೆ. ನಮ್ಮ ಏರಿಯಾದಲ್ಲೇ ಇದ್ದ ಪೋಲೀಸ್ ಸ್ಟೇಶನ್ನಿನ ಪೋಲೀಸ್ ಅಂಕಲ್ ಜಗದೀಶ್  ನನ್ನ ಕ್ಲೋಸ್ ಫ್ರೆಂಡ್ ಆಗಿದ್ರು, ಶಾಲೆಗೆ ಹೋಗ್ತಿನಿ ಅಂತ ಪೋಲೀಸ್ ಸ್ಟೇಶನ್ಗೆ ಹೋಗಿ ಅಂಕಲ್ ನಿಮ್ಮ ಟೋಪಿ ನನಗೆ ಕೊಡ್ತಿರಾ! ಅಂತಾ ಕೇಳ್ತಿದ್ದೆ ಅವರು ಮನೆಗೆ ಹೋಗಿದ್ದಾಗ ಅವರ ಮನೆಯಿಂದ ಅವರ ಕ್ಯಾಪ್ ಕದ್ದು ಬ್ಯಾಗಲ್ಲಿ ಹಾಕ್ಕೊಂಡು ಬಂದು ಮನೆಯವರ ಹತ್ರ ನಾಯಿಗೆ ಹೊಡ್ಸಕಂಡಂಗೆ ಹೊಡ್ಸಕಂಡಿದ್ದಿನಿ,  ನಿಮ್ಮಗಳು  ಒಂದಿನ ನನ್ನ ಕೆಲ್ಸಕ್ಕೆ ಕತ್ರಿ ಹಾಕ್ತಾಳೆ ಅಂತ ಜಗ್ಗು ಅಂಕಲ್ ಅಮ್ಮನತ್ರ  ಹೇಳಿದ್ದು ಇದೆ. ಚಿಕ್ಕೋಳಿದ್ದಾಗ ಒಂದು ದೊಡ್ಡ ಕೋಲನ್ನು  ಲಾಟಿ ಮಾಡ್ಕೊಂಡು ಅಕ್ಕ ಪಕ್ಕ ಕೂತ್ಕಂಡ ನನ್ನ ದೋಸ್ತಿಗಳ್ಗೆ ಹಾಕ್ಕೋಂಡು ಚಚ್ತಿದ್ದೆ. ಟೀಚರ್ ನನ್ನಾಕ್ಕೊಂಡು ತುಳಿತಿದ್ರು. ಡೈಲಿ ಮಮ್ಮಿಗೆ ಕಂಪ್ಲೇಂಟ್ ಮೇಲೆ ಕಂಪ್ಲೇಂಟ್. ‘ಪೋಲಿ ಸಾಗ್ತಿಯೋ, ಕ್ರಿಮಿನಲಾಗ್ತಿಯೋ… ಆ ದೇವರಿಗೆ ಗೊತ್ತು’ ಅಂತ  ಅಮ್ಮ ಹೀಯಾಳಿಸ್ತಿದ್ರು. ನನ್ನ ಪುಟ್ಟಿ (ಮೊಮ್ಮಗಳು) ಒಂದಿನ ಒಳ್ಳೆ  ಸ್ಥಾನಕ್ಕೆ ಹೋಗ್ತಾಳೆ ನೋಡ್ತಿರು ಅಂತ ಅಮ್ಮಮ್ಮ ನನ್ನ ವಹಿಸಿಕೊಂಡು  ಮಾತಾಡ್ತಿದ್ರೆ ಯಾವ್ದೋ ಕ್ರಿಮಿನಲ್ ಕೇಸ್ ಗೆದ್ದಷ್ಟು ಖುಷಿ ಆಗ್ತಿತ್ತು. ಅಮ್ಮಮ್ಮ  ನಾನ್ ಪೋಲೀಸ್ ಆದ್ಮೇಲೆ ನನ್ಗೆ ಬೈಕ್ ಕೊಡಸ್ತಿರಲ್ಲ ಅಂತ ಕೇಳ್ತಿದ್ದೆ ಅದ್ಕೆ ಅವ್ರು ಡಿಪಾರ್ಟಮೆಂಟಿಂದನೆ ಕೊಡ್ತಾರೆ,  ನಾನು ನಿಂಗೆ ವಿಮಾನ ಕೊಡಿಸ್ತಿನಿ ಅಂತ ಗೇಲಿ ಮಾಡ್ತಿದ್ರು ಜಗ್ಗು ಅಂಕಲ್ ಟ್ರಾನ್ಸ್‌ಫರ್ರಾಗಿ ಕೋಲಾರಕ್ಕೆ ಹೋದಾಗ ಪ್ರಪಂಚ ಕಳಚಿ ತಲೆ ಮೇಲೆ ಬಿದ್ದಾಗಾಯ್ತು. ಅಯ್ಯೋ! ನಾನು ಮೆಚ್ಚಿದ ಟೋಪಿನ ನನ್ನಿಂದ ದೂರ ಮಾಡ್ತಿರಲ್ಲ ಇವಾಗೇನ್ ಮಾಡ್ಲಿ ಅನ್ನೋ ಆತಂಕ  ಆವತ್ತು ಶಾಲೆಗೆ ಚಕ್ಕರ್ ಹಾಕಿ ಮನೆಲೇ ಇದ್ದೆ, ಇನ್ನು ಅವ್ರ ಕ್ಯಾಪ್  ಸಿಕ್ಕಲ್ವಲ್ಲ ಅಂತ ಬಿಕ್ಕಿ ಬಿಕ್ಕಿ ಅತ್ತಿದ್ದೆ. ಜಗ್ಗು ಅಂಕಲ್ ಹೋಗೋ ಮೊದ್ಲು ಅವರತ್ರ ಸರಿ ಮಾತಾಡ್ಲಿಲ್ಲ. ಅವ್ರ ಪೋಲೀಸ್ ಟೋಪಿನ ಎದೆಗವಚಿಕೊಂಡು ಗೋಳಾಡಿದ್ದೆ, ನಸೀಬ್ ಇದ್ರೆ ಮತ್ತೆ ಸಿಗೋಣ ಅಂದ್ಕೊಂಡೇ, ಅಂಕಲ್ ಟೋಪಿಗೆ ಟಾ ಟಾ, ಬಾಯ್ ಬಾಯ್ ಹೇಳಿ ನಮ್ಮನೆ ಹಿಂದಿರೊ ಹೊಳೆ ದಂಡೇಲಿ ಕೂತ್ಕೋಂಡು ಆಕಾಶ ನೋಡ್ತಿದ್ದೆ, ಆವತ್ತು ರಾತ್ರಿ ಯಾಕೋ ನಿದ್ದೇನೆ ಬರ್ಲಿಲ್ಲ. ಯಾವ ವಸ್ತುನೋಡಿದ್ರೂ ಆ ನನ್ನ ಟೋಪಿನೇ ಕಾಣ್ತಿತ್ತು.



ನಾನ್ ಪಟ್ಟಿದ್ದಸಂಕಟ ನೋಡಿ ಅಮ್ಮಮ್ಮ  ನನತ್ರ  ಬಂದು ನಾನು ನಿದ್ದೆ ಹೋಗೋ ತನ್ಕ ನನ್ತಲಿ ಸಪ್ರಿದ್ರಂತೆ. ಶಾಲೆಗೆ ಹೋಗೋಕೆ ಮನಸೆ ಬರ್‍ತಿಲ್ಲಿಲ್ಲ. ಟೀಚರ್ ನನ್ಗೆ ಹೊಟ್ಟೆ ನೋವ್ತಿದೆ ಅಂತ ನೆಪ ಹೇಳಿ ಮನೆಗೆ ಓಡಿ ಬರ್‍ತಿದ್ದೆ. ಟೋಪ್ಪಿ ಅಂಕಲ್ನ ಬೀಗ ಹಾಕಿದ ಮನೆ  ನೋಡಿ ಬೇಜಾರ್ ಆಗ್ತಿತ್ತು. ಪೋಲೀಸ್ ಟೋಪ್ಪಿ ಕನಸ್ನೂಡ ಬೀಳ್ತಿತ್ತು.  ಆ ಕನ್ಸಲ್ಲಿ ನಾನು

ಪೋಲೀಸ್ ಯುನಿಫಾರಂ ಟೋಪ್ಪಿ ಹಾಕಿ ಬೈಕ್ಮೇಲಿ ಕೂತ್ಕಂಡು ಅಮ್ಮಮ್ನ ಹಿಂದೆ ಕೂರಿಸ್ಕಂಡು ಊರೆಲ್ಲಾ ತಿರಗ್ತಿದ್ದೆ ಹೀಗೆ ಈ ನನ್ನ ಮಾತು, ಆ ಪೋಲೀಸ್ ಟೋಪಿಗೆ ಅವಿನಾಭಾವ ಸಂಬಂಧ ಬೆಳೆದಿತ್ತು.

ಅದೇನೋ ಗೊತ್ತಿಲ್ಲ ಕಂಡ್ರಿ ಆ ಪೋಲೀಸ್ ಪೋಸ್ಟ್ ಅಂದ್ರೆ ನನ್ಗೆ ಎಲ್ಲಿಲ್ಲದ ಪ್ರೀತಿ ಮತ್ತು ಗೌರವ. ಯಾರಾದ್ರೂ  ಪೋಲೀಸ್  ಡಿಪಾರ್ಟಮೆಂಟ್ವರ್‍ನ  ಕಂಡ್ರೆ ನನ್ಮುಖ ಎಂತ ಟೈಂನಲ್ಲೂ ಸೂರ್ಯಕಾಂತಿ ತರ ಅರಳ್ತಿತ್ತು. ಯಾರಾದ್ರೂ  ಹೆಣ್ಮಕ್ಳು  ಪೋಲೀಸಾಗಿದ್ರೆ  ನಾನೇ ಯುನಿಫಾರಂ ಹಾಕ್ಕಂಡಷ್ಟು ಆನಂದ ಆಗುತ್ತೆ. ಅಂತದ್ದೊಂದು ಅದೃಷ್ಟ ನನಗ್ಯಾವಾಗ ಬರುತ್ತೋ ಅಂತ ಯೋಚ್ಸಿಸ್ತಿನಿ. ಈಗ್ಲೂ ಜಗ್ಗು ಅಂಕಲ್ ಆವಾಗವಾಗ ಪೋನ್ ಮಾಡ್ತಾರೆ.  ಅವರ ಜೊತೆ ಪ್ರಬುದ್ಧವಾಗಿ ಅವ್ರ ಜೊತೆ  ಮಾತಾಡಿದ್ರು, ಮನ್ಸಲ್ಲಿರೋ ಪೋಲೀಸ್ ಟೋಪಿ ಖಾಖಿ ರಂಗು, ಗುಂಗುಗಳು ಇನ್ನೂ ಮಾಸಿಲ್ಲ.

## ನನ್ನ ಕನಸಿನ ಶಾಲೆ..

-ಮಂಜುನಾಥ್ ಎ ಆರ್

ಹಳ್ಳಿ ಹೈದನ ಮುದ್ದಿನ ಶಾಲೆ
ಗ್ರಾಮದ ಜನರಿಗೆ ನಲ್ಮೆಯ ಶಾಲೆ
ಅಕ್ಷರ ಕಲಿಕೆಯ ಪಾಠದ ಶಾಲೆ
ಮಕ್ಕಳಿಗೊಲಿದ ಜೀವದ ಶಾಲೆ ॥

ಹಸಿರನು ಚಾಚಿ ನಿಂತ ಶಾಲೆ
ಉಸಿರಿನ ಪಾಠವ ಮಾಡುವ ಶಾಲೆ
ಚಿತ್ರವ ಬಿಡಿಸುವ ಚಪ್ಪರ ಶಾಲೆ
ಓಟವ ಕಲಿಸಿದ ಆಟದ ಶಾಲೆ
ಜೀವನ ಕಲಿಸಿದ ಮುದ್ದಿನ ಶಾಲೆ ॥

ಸೌಮ್ಯವ ಒಲಿಸಿದ ಸಮತೆಯ ಶಾಲೆ
ಬುದ್ಧಿಯ ಹೇಳಿದ ಒಲವಿನ ಶಾಲೆ
ಮುದ್ದನು ಕಲಿಸಿದ ಬುದ್ಧಿಯ ಶಾಲೆ
ಮೌಲ್ಯವ ತೋರಿದ ಚಿಣ್ಣರ ಶಾಲೆ ॥



ಹಾಲನು ಉಣಿಸುವ ಅಮೃತ ಶಾಲೆ
ಅನ್ನವ ನೀಡಿದ ಪಾಕದ ಶಾಲೆ
ಭಕ್ತಿಯ ಕಲಿಸಿದ ಗುರುವಿನ ಶಾಲೆ
ರಕ್ಷಣೆ ನೀಡಿದ ಮುಕ್ತಿಯ ಶಾಲೆ ॥

ಸಖ್ಯವ ತಂದ ಕೀರ್ತಿಯ ಶಾಲೆ
ಸ್ವಂತಿಕೆ ಬೆಳಿಸಿದ ಗಟ್ಟಿಯ ಶಾಲೆ
ಸ್ವಾರ್ಥವ ಬಯಸದ ನಲ್ಮೆಯ ಶಾಲೆ
ನಾನು ಕಂಡ ಕನಸಿನ ಶಾಲೆ
ರವಿಯೂ ಕಾಣದ ನನಸಿನ ಶಾಲೆ ॥

Azim Premji Foundation

## ಸ್ಪೂರ್ತಿ ಸೆಲೆ ಅಜ್ಜಿ...

-ಚಿಕ್ಕವಿರೇಶ್

***ಪ್ರೌಡಶಾಲಾ ಶಿಕ್ಷಕಿಯಾಗಿ, ಶಿಕ್ಷಕ ತರಬೇತಿ ಕೇಂದ್ರದಲ್ಲಿ ಉಪನ್ಯಾಸಕಿಯಾಗಿ ಸುಧೀರ್ಘ ಪಯಣಸಾಗಿಸಿ, ನಿವೃತ್ತಿಯ ನಂತರ ಸುಮಾರು 23 ವರ್ಷಗಳ ಕಾಲ ಹೀಗೆ ಬೇರೆಬೇರೆ ಶಾಲೆಗಳಲ್ಲಿ ಸ್ವಯಂಸೇವಕರಾಗಿ ವೃತ್ತಿ ಬದುಕಿನ ಅನುಭವವನ್ನು ವಿಶ್ರಾಂತ ಜೀವನದಲ್ಲಿ ಮಕ್ಕಳಿಗೆ ಹಂಚಿಕೊಡುತ್ತಾ ನಮ್ಮೆಲ್ಲರಿಗೂ ಸ್ಪೂರ್ತಿಯಾಗಿದ್ದಾರೆ. ಅವರಿಗೀಗ 83 ವರ್ಷವಾಗಿದ್ದು, ಸಾಫ್ಟ್‌ವೇರ್ ಕಂಪನಿಯ ಮಾಲಿಕರಾಗಿರುವ ಮಗ, ಸೊಸೆ, ಕಾಲೇಜಿನಲ್ಲಿ ಉಪನ್ಯಾಸಕರಾಗಿಯೇ ನಿವೃತ್ತಿಹೊಂದಿರುವ ಪತಿ ಇವರ ಕುಟುಂಬ ಸದಸ್ಯರು. ಕಳೆದ ಮೂರು ವರ್ಷಗಳಿಂದ ಇದೇ ಶಾಲೆಯಲ್ಲಿ ಒಂದು ದಿನವೂ ಬಿಡದೇ ಬಂದು, ಮಕ್ಕಳಿಗೆ ಪಾಠಮಾಡುವುದೆಂದರೆ ಅವರ ಚೈತನ್ಯಯುತ ಬದುಕಿಗೆ ತಲೆಬಾಗಬೇಕಿನಿಸುವುದು.***



ಮತ್ತೆ ಈ ಬಾರಿ ಹೊಸ ಫೋಕಸ್ ಶಾಲೆ ಆಯ್ಕೆಮಾಡಿಕೊಂಡು ಶಾಲಾ ಕಲಿಕೆಯನ್ನು ಮುಂದುವರಿಸಿದ್ದೇನೆ. ಮಕ್ಕಳ, ಪ್ರೀತಿ, ತುಂಟಾಟ, ಗದ್ದಲಗಳು ಮಾಸದೇ ಎಂದಿನಂತೆಯೇ ಮತ್ತೆ ನನ್ನ ಮುದಗೊಳಿಸುತ್ತಿವೆ, ಮತ್ತು ಕ್ರೀಯಾಶೀಲನಾಗಿರುವಂತೆ ಮಾಡಿವೆ. ಈ ಬಾರೆ ಶಾಲೆಯಲ್ಲಿ ವಿಶೇಷ ವ್ಯಕ್ತಿಯೊಬ್ಬರನ್ನು ಕಂಡು, ಅವರ ಬಗ್ಗೆ ಬರೆಯಲೇಬೇಕೆನಿಸಿತು. ಶಾಲೆಯೊಳಗೇ ಹೋಗುತ್ತಿದ್ದಂತೆಯೇ ಒಬ್ಬ ಅಜ್ಜಿಯನ್ನು ನೋಡಿದೆ. ಯಾರೋ ಮಗುವಿನ ಪಾಲಕರಿರಬೇಕು ಎಂದುಕೊಂಡು ಸುಮ್ಮನಾದೆ, ಮಾರನೇ ದಿನ ಮತ್ತೆ ಅವರನ್ನು ಕಂಡಾಗ ಕುತೂಹಲ, ಪ್ರಶ್ನೆಗಳು ಒಟ್ಟಿಗೆ ಸೇರಿ ಯಾರಿವರು ಎಂಬುದನ್ನು ತಿಳಿದುಕೊಳ್ಳುವಂತೆ ನನ್ನನ್ನು ಪ್ರೇರೇಪಿಸಿದವು. ಮುಖ್ಯ ಶಿಕ್ಷಕರನ್ನು ಕಂಡು ಮಾತನಾಡುವಾಗ ಅಜ್ಜಿಯ ಬಗ್ಗೆ ಪ್ರಸ್ತಾಪಿಸಿದೆ.

ನನಗೆ ಅಚ್ಚರಿಯೊಂದು ಕಾದಿತ್ತು. ಆ ಅಜ್ಜಿ ಕಳೆದ ಮೂರ್‍ನಾಲ್ಕು ವರ್ಷಗಳಿಂದಲೂ ಶಾಲೆಗೆ ಬರುತ್ತಿದ್ದಾರೆ. ಅವರ 8ನೇ ಕ್ಲಾಸಿನ ಸಮಾಜ ಮತ್ತು ಇಂಗ್ಲಿಷ್ ಹೇಳುವುದನ್ನು ಕಂಡು ಅಭಿಮಾನವುಂಟಾಯಿತು. ಇಳಿವಯಸ್ಸಿನ ಅವರ ಡೆಡಿಕೇಷನ್ ನನಗೆ ಆಶ್ಚರ್ಯವುಂಟುಮಾಡಿತು. ಅವರ ಈ ಆಸಕ್ತಿ, ಸಮರ್ಪಣೆ, ಮಕ್ಕಳ ಬಗೆಯ ಕಾಳಜಿಯ ಬಗ್ಗೆ ಅವರ ಬಾಯಲ್ಲಿ ಕೇಳಬೇಕೆಂದು ನಿರ್ಧರಿಸಿ ಅವರು ಕ್ಲಾಸ್‌ನಿಂದ ಹೊರಬರುವುದನ್ನೇ ಕಾದುಕುಳಿತೆ. ಅವರು ಹೊರಬಂದರು, ಪರಿಚಯಿಸಿಕೊಂಡು ಮಾತು ಶುರುಮಾಡಿದೆ. ಅವರು ಮಾತುಗಳನ್ನು ಕೇಳಿದ ನಂತರ ನನ್ನಲ್ಲಿ ಮತ್ತಷ್ಟು ಅಭಿಮಾನ ಮೂಡಿದ್ದಂತು ಸತ್ಯ. ಅವರ ಹೆಸರು ವನಜಾಕ್ಷಿ. ಪ್ರೌಢಶಾಲಾ ಶಿಕ್ಷಕಿಯಾಗಿ, ಶಿಕ್ಷಕ ತರಬೇತಿ ಕೇಂದ್ರದಲ್ಲಿ ಉಪನ್ಯಾಸಕಿಯಾಗಿ ಸುಧೀರ್ಘ ಪಯಣಸಾಗಿಸಿ, ನಿವೃತ್ತಿಯ ನಂತರ ಸುಮಾರು 23 ವರ್ಷಗಳ ಕಾಲ ಹೀಗೆ ಬೇರೆ ಬೇರೆ ಶಾಲೆಗಳಲ್ಲಿ ಸ್ವಯಂಸೇವಕರಾಗಿ ವೃತ್ತಿ ಬದುಕಿನ ಅನುಭವವನ್ನು ವಿಶ್ರಾಂತ ಜೀವನದಲ್ಲಿ ಮಕ್ಕಳಿಗೆ ಹಂಚಿಕೊಡುತ್ತಾ ನಮ್ಮೆಲ್ಲರಿಗೂ ಸ್ಪೂರ್ತಿಯಾಗಿದ್ದಾರೆ. ಅವರಿಗೀಗ 83 ವರ್ಷವಾಗಿದ್ದು, ಸಾಫ್ಟ್‌ವೇರ್ ಕಂಪನಿಯ ಮಾಲಿಕರಾಗಿರುವ ಮಗ, ಸೊಸೆ, ಕಾಲೇಜಿನಲ್ಲಿ ಉಪನ್ಯಾಸಕರಾಗಿಯೇ ನಿವೃತ್ತಿಹೊಂದಿರುವ ಪತಿ ಇವರ ಕುಟುಂಬ ಸದಸ್ಯರು. ಕಳೆದ ಮೂರು ವರ್ಷಗಳಿಂದ ಇದೇ ಶಾಲೆಯಲ್ಲಿ ಒಂದು ದಿ ನವೂ ಬಿಡದೇ ಬಂದು, ಮಕ್ಕಳಿಗೆ ಪಾಠಮಾಡುವುದೆಂದರೆ ಅವರ ಚೈತನ್ಯಯುತ ಬದುಕಿಗೆ ತಲೆಬಾಗಬೇಕಿನಿಸುವುದು. ಮುಖ್ಯಶಿಕ್ಷಕರೇ ಹೇಳಿದಂತೆ ಈ ಮೂರು ವರ್ಷಗಳಲ್ಲಿ ಅವರು ಶಾಲೆಗೆ ಬರದಿರುವುದು, ಬರೀ ಬೆರಳೆಣಿಕೆಯಷ್ಟು ದಿನ ಮಾತ್ರ. ಅನಿವಾರ್ಯವಾಗಿ ಬರಲು ಸಾಧ್ಯವಾಗದ ಎಲ್ಲಾ ಸಂದರ್ಭಗಳಲ್ಲೂ ಮುಖ್ಯ ಶಿಕ್ಷಕರಿಗೆ ಮಾಹಿತಿ ನೀಡುತ್ತಾರಂತೆ, ಹೇಳದೇ ಹೋಗಿಲ್ಲವೆಂಬ ಮುಖ್ಯ ಶಿಕ್ಷಕರ ಅಭಿಮಾನದ ಮಾತು ವನಜಾಕ್ಷಿ ಮೇಡಂರವರ ಬದ್ಧತೆಯನ್ನು ಎತ್ತಿ ತೋರುತ್ತದೆ. ಸ್ವತಃ ನಾನೇ ಅವರ ಇಂಗ್ಲಿಷ್ ಕ್ಲಾಸ್‌ನಲ್ಲಿ ಕುಳಿತು ಅವಲೋಕನ ಮಾಡಿದಾಗ ನನಗೆ ಅತ್ಯಂತ ಇಷ್ಟವಾಗಿದ್ದು ಭಾಷಾ ಕೌಶಲ್ಯಗಳನ್ನು ತುಂಬಾ ಸರಳೀಕರಿಸಿ ಹೇಳೋ ರೀತಿ.

ನನಗೆ ತುಂಬಾ ಮಹತ್ವದ್ದೆನಿಸಿದ್ದೇನೆಂದರೆ, ಅವರ ಡೆಡಿಕೇಶನ್ ಮತ್ತು ಸೇವಾ ಮನೋಭಾವ. ಅದು ನನ್ನನ್ನು ನಿಜವಾಗಿ ಚಿಂತನೆಗೊಡ್ಡಿ ನನ್ನೊಳಗಿಂದ ನಮ್ಮನ್ನೊಮ್ಮೆ ನೋಡಿಕೊಳ್ಳುವಂತೆ ಮಾಡಿತು. ಏಕೆಂದರೆ ತುಂಬಾ ಸಲ ನಾವು ಮಾಡಲೇಬೇಕಾದ ಕರ್ತವ್ಯಕ್ಕೆ ಬೆನ್ನುತೋರಿಸಿ, ಕಥೆಹೇಳುತ್ತಾ ಜವಬ್ದಾರಿಗಳಿಂದ ನುಣಿಚಿಕೊಂಡು ತಿರುಗವಂತಹ ಈ ಸಂಧರ್ಭದಲ್ಲಿ, ತನ್ನದಲ್ಲದ ಮತ್ತು ಅನಿವಾರ್ಯವಲ್ಲದ ಕೆಲಸವನ್ನು ಯಾವುದೇ ಪ್ರತಿಫಲಾಪೇಕ್ಷೆ ಮಾಡದೇ ತುಂಬಾ ನೀಟ್ ಆಗಿ ನಿರ್ವಹಿಸುತ್ತಿರುವ ಈ ಪಾತ್ರ ನಮ್ಮನ್ನು ತುಂಬಾ ಕಾಡಬೇಕು, ಕಾಡಲೇಬೇಕಾಗಿದೆ.

# ಹನಿಗತೆಗಳು ……

-ಮಂಜುನಾಥ್ ಎ ಆರ್



1. ನಮ್ಮ ವ್ಯಥೆಗಳೇ ಜೀವಂತ
ಬದುಕು, ಅಲ್ಲಿ ಸುಖಗಳಿಗೆ
ಪೂರಕವಾಗಿ ಕಷ್ಟಗಳ ಹೂರಣ
ಇವ ಗೆದ್ದವನ ಮನೆಯ ಮುಂದಣ
ಹಚ್ಚ ಹಸುರಿನ ತೋರಣ.

2.ಎದುರಿಗಿದ್ದೂ ಸೇರೆವು ನಾವು
ಬಿಡಿಗಡದ ಸಮಯದಲ್ಲಿ
ಕೈ ಹಿಡಿದಂತೆ ಕಾಣೆವು ನಾವು
ಜೊತೆಗಿರುವ ಹಿತದಲ್ಲಿ
ಮರೆಯಾದಾಗ ನೋಡುವೆವು ನಾವು
ಬಾಳ ರಂಗಿನಾಟದ ಓಕಳಿಯ ಮೈಚೆಲ್ಲಿ

3. ಮಾತು ಮಾತಿಗೆ ಮುದ್ದಿಸಿದ ಒಡೆಯ
ಮಾತು ಮರೆಸಿ ಮುತ್ತಿನ ಮಳೆಗರೆಯೋ ಒಡತಿ
ಆಸೆ ಮಾಯೆಯ ಮೃಗವನ್ನೇರಿ
ಕಡಲಾಚೆ ಹಾರಿದ್ದು, ಅಮಲಿನಲಿ
ಅಮಲಿಳಿದಾಗ ತಿರುಗಿದರೆ ಅಡರಿತ್ತು ಮುಪ್ಪು
ಸೂರ್ಯ ಮುಳುಗುವುದರೊಳಗೆ ಉದುರಿತ್ತು
ಆ ನೀಲಿ ನತ್ತು.

4. ಕಲಿತ ಕನ್ನಡಿ ಮುಂದೆ
ಬಳಿತ ಮುನ್ನುಡಿಯ ಬರೆದೆ
ಓ ನನ್ನ ಶಾಲೆಯ ಗುರುವೇ
ನೀ ನನ್ನ ಬದುಕಿಗೆ ಒಡವೆ.

## ಮರೆಯಲಾಗದ ಬಾಲ್ಯದ ಉಪವಾಸದ ದಿನಗಳು

– ಇಬ್ರಾಹಿಂ.ಪಿ


ಬಾಲ್ಯದಲ್ಲಿ ತಿನ್ನಲು ರಜೆ ಹಿಡಿಯುತ್ತಿದ್ದ ನನಗೆ, ಉಪವಾಸ ಬಂತೆಂದರೆ ಖುಷಿ. ರಂಜಾನಿನ ಮಹತ್ವ ಅಷ್ಟಾಗಿ ತಿಳಿಯದಿದ್ದರೂ ಮನೆಯವರ ಭಕ್ತಿ ಭಾವಗಳಿಂದ ಇಷ್ಟಿಷ್ಟಾಗಿಯೇ ತಿಳಿಯುವ ಸಮಯವದು. ಇನ್ನು 30 ದಿನ ಹಗಲು ಏನೂ ತಿನ್ನಲಿಕ್ಕಿಲ್ಲ ಎನ್ನುವುದೇ ಮಹತ್ವದ ವಿಷಯ!. ರಾತ್ರಿಯೇ ತಾಕೀತು ಮಾಡಿ ಮಲಗಿದರೂ, ಅತ್ತಾಳಕ್ಕೆ (ಉಪವಾಸ ಮಾಡಲು ಊಟ ಮಾಡುವುದು) ಯಾರೂ ಎಬ್ಬಿಸುತ್ತಾನೇ ಇರಲಿಲ್ಲ. ಅದ್ಯಾವ ಮಾಯೆಯಲ್ಲೋ ನಡುವೆ ಎಚ್ಚರವಾಗಿ ನೋಡಿದರೆ, ಎಲ್ಲರೂ ಸುಬಹಿ ನಮಾಝಿನಲ್ಲೋ, ಖುರ್‌ಆನ್ ಪಾರಾಯಣದಲ್ಲೋ ತಲ್ಲಿನ. ಬಾಂಗ್ ಆಗಿದೆ ಯೆಂದರಿವಾದೊಡನೆ ದು:ಖ ಉಕ್ಕಿ ಬರುತ್ತಿತ್ತು. ಅದೇ ಕೋಪದಲ್ಲಿ ಎಷ್ಟೋ ದಿನ ಬೆಳಗ್ಗೆ ಏನೂ ತಿನ್ನದೆ, ಉಪವಾಸ ಹಿಡಿದಿದ್ದೇನೆಂದು ಶಾಲೆಗೆ ಹೋದದ್ದಿದೆ.

ಅತ್ತೂ ಕರೆದೂ ಕಾಡಿ ಬೇಡಿ ವಾರಕ್ಕೊಂದು ಉಪವಾಸ ಹಿಡಿದರೂ ಶಾಲೆಯಿಂದ ಮನೆಗೆ ಬರುವಾಗ ಹಸಿವು ಬಾಯಾರಿಕೆಯಿಂದ ಕಂಗಾಲಾಗಿರುತ್ತಿದ್ದೆವು. ಕಲ್ಲಿನಲ್ಲಿ ಅರಿಯುತ್ತಿದ್ದ 'ಪತ್‌ರ್' (ಅಕ್ಕಿ ರೊಟ್ಟಿ) ಹಿಟ್ಟು, ಅಮ್ಮ ಘಮ್ಮನೆ ಹುರಿಯುತ್ತಿದ್ದ ರಾಗಿ, ಸಾರಿನ ಕಮ್ಮನೆ ಒಳಗೆಳೆದ ಉಸಿರಿನಲ್ಲಿಯೇ ಎಲ್ಲವನ್ನು ಸವಿದ ಅನುಭವ! ಈಗ ಬರೇ 5 ನಿಮಿಷ ನೆನೆಸುವ 'ಕಸ್ ಕಸ್' ಅನ್ನು ಅಮ್ಮ ಬೆಳಗ್ಗೆಯೇ ನೆನೆ ಹಾಕುತ್ತಿದ್ದರು. ಮರೆತರೆ..... ಅಂದು ಶರ್ಬತ್ ಇಲ್ಲದಾ ಫಜೀತಿ!

ಆಗೆಲ್ಲ ಕರಿದ ತಿಂಡಿಗಳ ಸಾಲಿನಲ್ಲಿ ಕಾಣುತ್ತಿದ್ದುದು ಸಮೋಸ ಮಾತ್ರ. ಮನೆಯಲ್ಲಂತೂ ಎಣ್ಣೆಯ ತಿಂಡಿಯೆಂದರೆ ಬರಿ ಈರುಳ್ಳಿ ಬಜೆ. ಅದರಾಚೆ ಯಾರಿಗೂ ಏನೂ ಗೊತ್ತಿಲ್ಲ ಬಿಡಿ. ಆದರೆ ಅದನ್ನು ಅಜ್ಞಾನ ವೆಂದುಕೊಂಡರೂ ಆ ಸುಖ, ಖುಷಿ ಇನ್ಯಾವತ್ತೂ ದಕ್ಕಲ್ಲ.

ಯಾವತ್ತೊ ಕೋಪಿಸಿದ ಗೆಳೆಯರಲ್ಲಿ ರಾಜಿಯಾಗುವುದು, ಶಾಲೆಯಲ್ಲಿ ಉಗುಳಲು ಆಗಾಗ ಹೊರಗೆ ಹೋಗುವುದು, ಉಪವಾಸ ಉಂಟು ಎಂದು ಹೇಳಿದವರು ಏನಾದರೂ ತಿನ್ನುತ್ತಾರಾ ಎಂದು ಹದ್ದಿನ ಕಣ್ಣಿನಲ್ಲಿ ನೋಡುವುದು, ಕಂಪಾಸಿನ ಕ್ಯಾಲ್ಕುಲೇಟರ್‌ನಲ್ಲಿ 'ತಸ್ಬೀಹ್' ಲೆಕ್ಕ ಹಾಕುವುದು, ನೀನು ಎಷ್ಟು ಉಪವಾಸ ಹಿಡಿದೆ? ನನ್ನದು ಇಷ್ಟಾಯಿತು ಎಂದು ಜಂಭ ಕೊಚ್ಚಿ ಕೊಳ್ಳುವುದು, ಮದ್ರಸಾದ ಪರೀಕ್ಷೆಯ ಫಲಿತಾಂಶಕ್ಕಾಗಿ ಕಾಯುವುದು..... ಹೀಗೆ ಬಾಲ್ಯದ ರಂಝಾನ್ ಮೊಗೆದಷ್ಟು ಬತ್ತದ ನೆನಪಿನೊರತೆ.

ಉಪವಾಸ ಹತ್ತು ದಾಟಿದಾಗಲೇ ತಳಮಳ ಶುರು. ಹೊಸಬಟ್ಟೆ ತರುವುದು ಯಾವಾಗ? ನೆರೆಮನೆಯ ಗೆಳೆಯರಲ್ಲಿ ಯಾರಿಗಾದರೂ ತಂದರಂತೂ ಮುಗಿದೇ ಬಿಟ್ಟಿತು, ಮತ್ತೆ ದಿನಾ ಅಮ್ಮ, ಅಪ್ಪನಲ್ಲಿ ಅದೇ ಗೋಳು. 'ಅವನಿಗೆ ತಂದಾಗಿದೆ ನನಗೆ ಯಾವಾಗ'? ಅಂತೂ ಹೊಸಬಟ್ಟೆ ತಂದು ಅದನ್ನು ಪೆರ್ನಾಳಿಗೆ (ಈದ್) ಹಾಕುವಷ್ಟರಲ್ಲಿ ಅದು ನೋಡಿ ನೋಡಿ ಹಾಳಾಗಿ ಬಿಡುತ್ತಿತ್ತು!.



# Valuable Day……………………………………………………………………...….-Lohita HN

One fine day the weather was cool which held to bed for an hour extra. I was already late took bath and in hurry completed my breakfast and left for school. By the time I reached, the assembly was over and children were returning to classrooms. As usual they started wishing me and in turn I wished them and went to office room. Teachers were busy in getting ready to move to their respective classes. Meanwhile, from 4th standard, a kid rushed towards office room and said one of her friend was crying. Immediately I and respective teacher went to classroom. After enquiring, we came to know that she had lost Rs 40 which was brought to pay scholarship fees. She was inconsolable and was continuously crying. I could sense a fear in child.

After an intense search by teacher and his fellow mate in school campus they were unable to find it. It became difficult to console her at that point of time. For me it was a matter of small amount but for the kid it was huge as it matters a lot to that poor family. At one point of time, I was about to take my wallet and pay the kid her lost amount. During which the teacher paid her amount from his pocket to console her. The kid was happy she gave decent smile wiping her




tears and ran to her classroom. I felt a sign of relief.

Later in evening when we were about to close classroom and go, two kids came running to school and gave Rs 40 which they found it on road and said that it belongs to kid who had lost it while coming to school. I was surprised and very much impressed by the behaviour of those kids who showed their loyalty and promptness. As a kid they know the importance of human values but as a grown up citizen we many times disrespect human values. It was a great learning for me,

## ಖುಷಿ ತಂದ ತರಗತಿ, ಮೂಡಿಬಂದ ಹೊಸ ಪ್ರಪಂಚ

.. **ಚಿತ್ರಾ**

ಕೋಣೆಯಲ್ಲಿ ಮಕ್ಕಳು ಏನೋ ಒಂದು ರೀತಿಯಲ್ಲಿ ಶಿಕ್ಷಕರಿರುವಾಗ ಬಂಧನಕ್ಕೊಳಪಟ್ಟವರಂತೆ ಭಾವಿಸುವುದು, ಇಲ್ಲಾ ಗಲಾಟೆ ಮಾಡುವುದು, ಈ ಎರಡನ್ನೂ ನಾವೆಲ್ಲಾ ನೋಡಿದ್ದೇವೆ. ಅದನ್ನು ಮೀರಿ ಕೆಲವೊಮ್ಮೆ ತರಗತಿ ಕೋಣೆಯು ಅದ್ಭುತವೆನಿಸುವ ಸಂಗತಿಗಳಿಗೆ ಸಾಕ್ಷಿಯಾಗಿಬಿಡುತ್ತದೆ. ಅಂಥದ್ದೊಂದು ನಡೆದಾಗ ಅದೊಂದು ವಿನೋದಮಯ ಪ್ರಪಂಚವಾಗಿ ಕಂಡು ಹಿಂದಿನ ಎಲ್ಲಾ ದಿನಗಳಿಗಿಂತಲೂ ಇದು ನನಗೆ ಸಂತೋಷದ ದಿನ ಎನಿಸಿಬಿಟ್ಟಿತು.



ನಾನು 5ನೇ ತರಗತಿಯ ಮಕ್ಕಳಿಗೆ ಗಣಿತದ ಪಾಠ ತೆಗೆದುಕೊಳ್ಳುವುದಕ್ಕಾಗಿ, ಅವರೊಂದಿಗೆ ಒಂದು ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಹೆಚ್ಚು ಹೆಚ್ಚು ಆ ತರಗತಿಗೆ ಹೋಗುತ್ತಿದ್ದೆ. ಆದರೆ ಮಕ್ಕಳನ್ನು ನಿಭಾಯಿಸುವುದು ನನಗೆ ಕಷ್ಟಸಾಧ್ಯವೆನಿಸಿಬಿಡುತ್ತಿತ್ತು. ಕೆಲವೊಮ್ಮೆ ಕೋಪ ತಡೆಯುವುದೇ ಕಷ್ಟವೆನಿಸಿಬಿಡುತ್ತಿತ್ತು. ಆದರೆ ಆ ಕೋಪವನ್ನು ನನ್ನನ್ನು ನಾನೇ ವಿಮರ್ಶೆಗೊಳಪಡಿಸಿಕೊಳ್ಳಲು ಪ್ರೇರಣೆಯನ್ನಾಗಿ ಬೆಳಸಿಕೊಂಡೆ. ನನಗೆ ಅರ್ಥವಾಗುತ್ತಿತ್ತು, ನನಗೆ ತರಗತಿಯನ್ನು ನಿರ್ವಹಿಸಲಾಗುತ್ತಿಲ್ಲ ಎನ್ನುವುದಾದರೇ, ನಾನು ಸೂಕ್ತವಾಗಿ ಅವರೊಂದಿಗೆ ಬೆರೆತಿಲ್ಲ, ಅವರ ಆಸಕ್ತಿಗಳನ್ನು ಅರ್ಥೈಸಿಕೊಂಡಿಲ್ಲವೆನಿಸಿತು. 5 ಅಂಕಿಯ ಸಂಖ್ಯೆಗಳ ಪಾಠಮಾಡುವ ಮೊದಲು ಅದಕ್ಕೆ ಬೇಕಾದ ಪೂರ್ವಜ್ಞಾನವನ್ನು ಮತ್ತು ಚಟುವಟಿಕೆಗಳನ್ನು ಬೋರ್ಡ್ ಮೇಲೆ ಮಾಡಿಸಿದೆ. ಅದು  4 ದಿನ ತೆಗೆದುಕೊಂಡಿತ್ತು. ತದನಂತರ ಇಂದು ಮೊದಲೇ ಯೋಜಿಸಿದಂತೆ, ಆಟದ ಮೂಲಕ ಅವರನ್ನು ಆಕರ್ಷಿಸಲು ಬಯಸಿ, ಅದೇ ರೀತಿ ಮಾಡಿದೆ. ಫ್ಲಾಶ್ ಕಾರ್ಡ್‌ಗಳನ್ನು ಬಳಸಿ ತರಗತಿಯನ್ನು ಪ್ರಾರಂಭಿಸಿದೆ. ನನಗೆ ಕಂಡದ್ದೆಲ್ಲವೂ ಅಚ್ಚರಿಮೂಡಿಸುವಂತಿತ್ತು. ನಾನು ನಾಲ್ಕು ಗುಂಪುಗಳಲ್ಲಿ ಮಕ್ಕಳಿಗೆ ಕುಳಿತುಕೊಳ್ಳುವಂತೆ ಹೇಳಿ **ರಾಮಾನುಜಂ, ಹಾರ್ಡಿ, ಗೆಸ್ ಮತ್ತು ಪೈಥಾಗೋರಸ್‌ನ** ಹೆಸರುಗಳನ್ನು ಗುಂಪುಗಳಿಗೆ ಇಟ್ಟೆ. ಆ ಎಲ್ಲಾ ಮಕ್ಕಳು ಗುಂಪುಗಳಲ್ಲಿ ಕುಳಿತರು. ಎಲ್ಲಾ ಗುಂಪಿಗೂ ಐದೈದು ಫ್ಲಾಶ್‌ಕಾರ್ಡ್‌ಗಳನ್ನು ನೀಡಿದೆ. ಅವುಗಳಲ್ಲಿ '೦' ಯಿಂದ '೯'ರೊಳಗಿನ 5 ಬೇರೆ ಬೇರೆ ಅಂಕಿಗಳಿದ್ದವು. ಆಗ ನಾನು ಅವರಿಗೆ ನಾಲ್ಕು ಅಂಕಿಗಳ ಸಂಖ್ಯೆಯನ್ನು ರೂಪಿಸುವಂತೆ ಹೇಳಿದೆ. ಉದಾಹರಣೆಗೆ ನಾನು 1000 ಎಂದು ಹೇಳಿದಾಗ, ಬೇರೆ ಬೇರೆ ಗುಂಪುಗಳಿಂದ '1' '೦''೦''೦'ಗಳನ್ನು ಬರೆದಿರುವ ವಿದ್ಯಾರ್ಥಿಗಳು ಬಂದು ಎಲ್ಲರಿಗೂ ಕಾಣುವಂತೆ ಸರಿಯಾದ ಕ್ರಮದಲ್ಲಿ ನಿಂತು ಒಂದು ಸಾವಿರದ ಸಂಖ್ಯೆಯನ್ನು ರೂಪಿಸಬೇಕು. ಮೊದಲು ನಾನು ಉದ್ದೇಶಪೂರ್ವಕವಾಗಿ '೦''೦''೦' '1' ಕ್ರಮದಲ್ಲಿ ಕಾರ್ಡ್ ಹಿಡಿದಿದ್ದ ವಿದ್ಯಾರ್ಥಿಯಗಳನ್ನು ನಿಲ್ಲಿಸಿದ್ದೆ. ಅಂಕಿಯ ಮೊದಲು ಬರುವ ಸೊನ್ನೆಗೆ ಬೆಲೆಯಿಲ್ಲ ಎಂಬುದನ್ನು ಅರಿತ '1'ನ್ನು ಹಿಡಿದಿದ್ದ ವಿದ್ಯಾರ್ಥಿನಿ ಓಡಿಹೋಗಿ ಎಲ್ಲರಿಗಿಂತ ಮೊದಲು ನಿಂತು 1000 ಸಂಖ್ಯೆಯನ್ನು ರೂಪಿಸಿದಳು. ನನಗೆ ಅರ್ಥವಾಗಿದ್ದೇನೆಂದರೆ, ಈ ವಿಷಯವನ್ನು ಹಿಂದಿನ ತರಗತಿಗಳಲ್ಲಿ ಕಲಿತದ್ದನ್ನು ಪುನರ್‌ಪರಿಶೀಲನೆ ಮಾಡಿಕೊಳ್ಳುವ ಮೂಲಕ ತಪ್ಪನ್ನು ಸರಿಪಡಿಸಿಕೊಂಡದ್ದು ಎಂಬುದು. ಆದರೆ ನನ್ನ ಉದ್ದೇಶವಿದ್ದದ್ದು 5 ಅಂಕಿಗಳ ಸಂಖ್ಯೆಯನ್ನು ಕಲಿಸುವುದಾಗಿತ್ತು. ಹಾಗಾಗಿ, ಮತ್ತೊಬ್ಬರನ್ನು ಕರೆದು ನಿಲ್ಲುವಂತೆ ಹೇಳಿದೆ. 5 ತಲೆಗಳು 5 ಅಂಕಿಗಳನ್ನು ಸೂಚಿಸುವುದರ ಜೊತೆಗೆ ನಿಂತಿರುವ ಕ್ರಮದ ಆಧಾರದಲ್ಲಿ 5 ರ ಸಂಖ್ಯೆ ರೂಪಗೊಳ್ಳುತ್ತದೆ ಎಂಬುದನ್ನು ಅರಿಯಲು ತಡವಾಗಲಿಲ್ಲ. ನಿರಾಯಾಸವಾಗಿ ಅವರು ಕಲಿತಾಗಿತ್ತು. ನಿಮ್ಮೊಂದಿಗೆ ಹಂಚಿಕೊಳ್ಳಲು ಪ್ರೇರೇಪಿಸಿದ್ದು ಅವರ ಶಾಂತತೆ. ಸದಾ ಗಲಾಟೆಗಳಿಂದ ನಿರಾಶಳಾಗಿದ್ದಾಗ, ಇಂಥಹದ್ದೊಂದು ಪ್ರಯೋಗ ನನ್ನಲ್ಲಿ ಹೊಸ ಚಿಂತನೆಗಳನ್ನು ಮೂಡಿಸಿದೆ. ನಂತರ ಎಲ್ಲಾ ಗುಂಪುಗಳಿಗೆ ತಮ್ಮಲಿ ್ಲರುವ ಫ್ಲಾಶ್ ಕಾರ್ಡ್‌ಗಳನ್ನು ಬಳಸಿಕೊಂಡು ಸಾಧ್ಯವಾದಷ್ಟು 5ರ ಸಂಖ್ಯೆಗಳನ್ನು  ಬರೆಯುವಂತೆ ಹೇಳಿದೆ. ಪ್ರತಿಯೊಂದು ಗುಂಪಿನಲ್ಲೂ 25ಕ್ಕಿಂತಲೂ ಅಧಿಕ ಸಂಖ್ಯೆಗಳನ್ನು ಮಕ್ಕಳು ಬರೆದಿದ್ದರು. ನನ್ನ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಹಾಜರಿದ್ದ ಪ್ರತಿ ಮಗುವಿನ ತೊಡಗಿಸುವಿಕೆಯು ನನಗೆ ಖುಷಿಕೊಟ್ಟಿತ್ತು.



# ಮೆರವಣಿಗೆ – ಶಿವಕುಮಾರ ಸಿ ಎಸ್

ಏಳುತೇಳುತ

ತೆರೆಮರೆಯ ಸುತ್ತಿನಲಿ

ಬಳುಕಿನಲಿ ಕರೆಕರೆದು

ಕರ ಚಿಗಿದು ಅಪ್ಪಿಕೊಂಡಿದ್ದೇನೆ ನೆನೆಪುಗಳ

ತೀರಕೆ ನೇರಕೆ

ಭೂಮ್ಯಾಕಾಶ ಸಾಗರಕೆ

ಜೋತುಬಿದ್ದ ಕನಸುಗಳು

ಮೆರವಣಿಗೆ ಹೊರಟಿವೆ ದೂರಕೆ

ಥಳುಕು-ಬಳುಕು ಧಡಕ್ಕು ಸದ್ದಿನಲಿ

ಬಣ್ಣ ಬೆಡಗಿನ ಬೇಟದಲಿ

ನೆನ್ನೆಗಳ ನಡುವೆ ಮೈಯ್ಯ ಚಿಗಿದು

ಧರಣಿ ಕೂತಿವೆ ನಾಳೆಗಳು ಮಬ್ಬಿನಲಿ

ಯಾರೋ ದೂಡಿದ ಬಯಲೊಳಗೆ

ನಿರಾಕಾರ ಸೂತ್ರ ಹಿಡಿದು

ಆತ್ಮವ ತಬ್ಬಿ ಆಕಳಿಸುತ್ತಾ

ಜಗ್ಗುವ ಜಗದೊಳು ಹೊರಳಿ

ಆಗಾಗ ಕೆರಳಿ

ಕಾಲ ದೂಕುತ್ತಿದ್ದೇನೆ ತೂಕಡಿಸುತ್ತಾ

ಮುರಿದು ಕಟ್ಟುವ ಭಾವಗಳಿಗೆ

ಕೊರತೆ ಇದೆ; ಜೊತೆಗೆ

ಒಂದಷ್ಟು ಒರತೆಯೂ ಇದೆ

ಇಂದು ನೆನ್ನೆಗಳ ಲೆಕ್ಕಕ್ಕೆ ಚಿಗಿದಾಗ

ಏನೋ ಸಿಕ್ಕುವುದು ಕೊನೆಗೆ

ಪದಕೆ ಪದ ಬೆರೆತು ಪದ್ಯವಾಯಿತು !!

## ಅವು ಪುಸ್ತಕಗಳಲ್ಲ,ಮನಸುಗಳು –ಸಂಜಯ ಡ್ಯಾನಿಯಲ್

ಎಷ್ಟೋ ಬಾರಿ ನಾವು ನಮ್ಮ ಗ್ರಂಥಾಲಯಗಳಲ್ಲಿರುವ ಪುಸ್ತಕಗಳನ್ನು ಸಾಮಾನ್ಯವಾದ ವಸ್ತುಗಳೆಂದು ತಿಳಿಯುತ್ತೇವೆ. ಜಯಂತ್ ಕಾಯ್ಕಿಣಿ ಎಂಬ ಮಧುರ ಸಾಹಿತಿಗೆ ಅವು ಮನಸುಗಳಂತೆ. ಅವರ ಮಾತು ಈ ನನ್ನ ಬರವಣಿಗೆಗೆ ಕಾರಣವಾಗಿದೆ. ಎಷ್ಟೋ ಬಾರಿ ನಮ್ಮಲ್ಲಿರುವ ಪುಸ್ತಕಗಳ ಮೇಲೆ ದೂಳು ಕೂತಿರುತ್ತದೆ ಎಂದು. ಆದರೆ ಈಗ ಅನಿಸುತ್ತದೆ, ಅವು ನಾವು ತೆರೆದು ನೋಡಲಾಗದಂತಹ ಮನಸುಗಳೆಂದು ಬದುಕಿನಲ್ಲಿ ಅನೇಕ ಮನಸುಗಳ ಪರಿಚಯ ನಮಗೆ ದಿನ ನಿತ್ಯವೂ ಆಗುತ್ತಲೇ ಇರುತ್ತದೆ. ಆದರೆ ಅವುಗಳಲ್ಲಿ ನಾನಾ ತರಹದ ಮನಸುಗಳು ಇರುತ್ತವೆ, ಕೆಲವು ಮನಸುಗಳನ್ನು ನಾವು ಪರಿಗಣಿಸುವುದಿಲ್ಲ ಮತ್ತು ಇನ್ನು ಕೆಲವು ಮನಸುಗಳು ನಮಗೆ ಅರ್ಥವಾಗುವುದೇ ಇಲ್ಲ. ಇಲ್ಲಿನ ಒಂದು ಸಂಗತಿಯೆಂದರೆ "ಪರಿಗಣಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದೇ ಅಲ್ಲವೇ ಬದುಕು" ಎಷ್ಟೋ ಸಾರಿ ಕೆಲ ಮನಸುಗಳು ನಮಗೆ ಅರ್ಧದಷ್ಟು ಮಾತ್ರ ತಿಳಿದಿರುತ್ತದೆ. ಅವು ನಮ್ಮ ಪುಸ್ತಕದ ಮಧ್ಯ ನಾವು ಬಿಟ್ಟ ಬೆರಳಿನ ಗುರುತುಗಳು. ಅಂತಹ ಮನಸುಗಳಿಗೆ ನಿಮ್ಮ *ಓದೇ* ಮೋಕ್ಷ ಏಕೆಂದರೆ ಅವು ತೆರೆದಿವೆ, ಮುಚ್ಚದಿರಿ. ನಮ್ಮ ಜೀವನದ ಅನುಭವಗಳಿಗೆ ಮತ್ತು ಜ್ಞಾನದ ಮಧ್ಯ ಉಂಟಾಗುವ ಸೇತುವೆಗಳೇ, ನಾವು ಭೇಟಿ ಮಾಡುವ ಹಲವಾರು ಮನಸುಗಳು. ಅಂತಹ ಮನಸುಗಳೇ ನಾವು ಓದುವಂತಹ ಪುಸ್ತಕಗಳಲ್ಲವೇ, ಅಪರಾಧಕ್ಕೆ ಕಾರಗೃಹಗಳಿವೆಯಷ್ಟೇ ಅನುಭವಗಳಿಗೆಲ್ಲಿದೆ? ಅಂತಹ ನಮ್ಮ ಪುಸ್ತಕಗಳೆಂಬ ಮನಸುಗಳನ್ನು ಗ್ರಂಥಾಲಯವೆಂಬ ಕೋಣೆಯಲ್ಲಿ ಬಂದಿಸಿಡದೇ ನಗಲು ಬಿಡೋಣ.

# TEAM FA-TALKIES



| | | | |
|---|---|---|---|
| 1 | Raghavendra B T | raghavendra.bt@azimpremjifoundation.org | 9036463505 |
| 2 | Santosh Diksangi | santoshkumar.diksangi@azimpremjifoundation.org | 9019679673 |
| 3 | Lohitha H N | lohitha.n@azimpremjifoundation.org | 9008936789 |
| 4 | Vijayashree P S | vijayashree.ps@azimpremjifoundation.org | 9108785756 |
| 5 | Chitra P | chithra.p@azimpremjifoundation.org | 7899908166 |
| 6 | Shivakumar C S | shivakumara.cs@azimpremjifoundation.org | 9019396224 |
| 7 | Manjunatha A R | manjunatha.ar@azimpremjifoundation.org | 8123057135 |



***Cover Page by: Supriya Narayanakar, Thematic sketches by: Santosh Diksangi and Manasa R***